# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:185 Issue:185 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 16.12.2023 • ಶನಿವಾರ Saturday • ಪುಟ:04 Page:04 • ಬೆಲೆ:2 Rs:2



With Your support we reach
30,000+
HAMPI TIMES epaper readers
ನಿಮ್ಮ ನೆಚ್ಚಿನ ಗ್ರಾಹಕರಿಗೆ ನಿಮ್ಮ ಉತ್ಪನ್ನ ಹಾಗೂ ಸೇವೆಯ ಮಾಹಿತಿ ತಲುಪಿಸಲು ಸಂಪರ್ಕಿಸಿ
PRINT & DIGITAL Advertisement
Valmiki Circle, Hosapete-583201
9448633038
hampitimes@gmail.com
www.hampitimes.com
epaper.hampitimes.com



ಹೋಲ್ ಸೇಲ್
ಧರದಲ್ಲಿ ವಾಣಿಜ್ಯ ಮತ್ತು ಗೃಹ ಬಳಕೆ ವಸ್ತುಗಳ ಮಾರಾಟ
ಮದುವೆ, ಹೋಟೆಲ್, ಗಿಫ್ಟ್, ಶುಭ ಸಮಾರಂಭ, ಪೂಜೆ, ಗೃಹ ಬಳಕೆ, ಅಡುಗೆ ವಿವಿಧ ಸಲಕರಣೆಗಳಿಗಾಗಿ ಭೇಟಿ ನೀಡಿ.
ಶ್ರೀ ರಾಜಲಕ್ಷ್ಮೀ ಏಜೆನ್ಸೀಸ್
Rajalakshmi
ಬಾಲಾ ಟಾಕೀಸ್ ಹತ್ತಿರ, ಶ್ರೀ ಬನ್ನಿ ಮಹಂಕಾಳಿ ಗುಡಿ ಪಕ್ಕದಲ್ಲಿ
ಹಂಪಿ ರಸ್ತೆ, ಹೊಸಪೇಟೆ
9242418650, 9986123989
BAJAJ FINSERV EMI FINANCE


## ಮೈಕ್ರೋ ನ್ಯೂಸ್

### ಡಿ.20ರಂದು ಹಗರಿಬೊಮ್ಮನಹಳ್ಳಿಯಲ್ಲಿ ಜನತಾದರ್ಶನ

ಹಂಪಿ ಟೈಮ್ಸ್ ಹೊಸಪೇಟೆ

ಜಿಲ್ಲಾಡಳಿತದಿಂದ ತಾಲ್ಲೂಕು ಮಟ್ಟದ 'ಜನತಾದರ್ಶನ' ಕಾರ್ಯಕ್ರಮವನ್ನು ಡಿ.20ರಂದು ಬೆಳಿಗ್ಗೆ 10.30ಕ್ಕೆ ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಆಡಳಿತ ಸೌಧದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ತಿಳಿಸಿದ್ದಾರೆ.

ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಹಾರ ಕೈಗೊಳ್ಳುವ ನಿಟ್ಟಿನಲ್ಲಿ ಸಂಬಂಧಿಸಿದ ಚುನಾಯಿತ ಪ್ರತಿನಿಧಿಗಳು ಮತ್ತುಜಿಲ್ಲಾ ಮಟ್ಟದಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಲಿರುವ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಸಾರ್ವಜನಿಕರು ತಮ್ಮ ಅಹವಾಲುಗಳೊಂದಿಗೆ ಹಾಜರಿರುವಂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಸಾಲಕ್ಕೆ ಬಡ್ಡಿ ಸಹಾಯಧನ ಯೋಜನೆ: ಅರ್ಜಿಆಹ್ವಾನ

ಹಂಪಿ ಟೈಮ್ಸ್ ಹೊಸಪೇಟೆ

ಕೃಷಿ ಇಲಾಖೆಯಿಂದ ರೈತ ಉತ್ಪಾದಕರ ಸಂಸ್ಥೆಗಳ ಸಾಲಕ್ಕೆ ಶೇ.4ರ ಬಡ್ಡಿ ಸಹಾಯಧನ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿದೆ.

ಸರ್ಕಾರದಿಂದ 2023-24 ನೇ ಸಾಲಿನ ಆಯವ್ಯದಲ್ಲಿರೈತಉತ್ಪಾದಕರ ಸಂಸ್ಥೆಗಳನ್ನು ಬಲಪಡಿಸಲು ಹಿಂದುಳಿದ ತಾಲ್ಲೂಕಗಳ 100 ರೈತ ಉತ್ಪಾದಕ ಸಂಸ್ಥೆಗಳಿಗೆ ಸಹಕಾರಿ ಮತ್ತು ವಾಣಿಜ್ಯ ಬ್ಯಾಂಕುಗಳು ನೀಡುವ ತಲಾ ರೂ. 20 ಲಕ್ಷ ವರೆಗಿನ ಸಾಲಕ್ಕೆ ಶೇ 4% ರ ಬಡ್ಡಿ ಸಹಾಯಧನ ನೀಡಲಾಗುವುದು ಎಂದು ಘೋಷಿಸಲಾಗಿರುತ್ತದೆ ಹಾಗೂ ಅನುಮೋದನೆ ನೀಡಲಾಗಿರುತ್ತದೆ. ವಿಜಯನಗರ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ರೈತ ಉತ್ಪಾದಕರ ಸಂಸ್ಥೆಗಳು ಈ ಪ್ರಯೋಜನವನ್ನು ಪಡೆಯಬಹುದಾಗಿದ್ದು, ಅರ್ಜಿ ಸಲ್ಲಿಸಲು ಡಿ.18 ಕೊನೆಯ ದಿನವಾಗಿರುತ್ತದೆ. ಸ್ವೀಕೃತವಾದ ಅರ್ಜಿಗಳಿಗೆ ನಿಯಮಾನಸಾರ ಬಡ್ಡಿ ಸಹಾಯಧನವನ್ನು ಸಂಬಂಧಿಸಿದ ಸಂಸ್ಥೆಗಳ ಸಾಲದಖಾತೆಗೆ ಪಾವತಿಸಲಾಗುವುದು. ಜಿಲ್ಲೆಯರೈತಉತ್ಪಾದಕರ ಸಂಸ್ಥೆಗಳು ತಮ್ಮತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರಕಚೇರಿಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿಯನ್ನು ಪಡೆಯಲು ಹಾಗೂ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಿ, ಈ ಯೋಜನೆಯ ಸದುಪಯೊಗ ಪಡೆದುಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕ ಶರಣಪ್ಪ ಮುದಗಲ್ ತಿಳಿಸಿದ್ದಾರೆ.

### ಗ್ರಾಮೀಣ ಉಪವಿಭಾಗದಲ್ಲಿ ಗ್ರಾಹಕರ ಸಂವಾದ ಸಭೆ ಡಿ.16ಕ್ಕೆ

ಹಂಪಿ ಟೈಮ್ಸ್ ಹೊಸಪೇಟೆ

ಜೆಸ್ಕಾಂಗ್ರಾಮೀಣ ಉಪವಿಭಾಗ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರ ಸಂವಾದ ಸಭೆಯನ್ನು ಡಿ.16ರಂದು ಆಯೋಜಿಸಲಾಗಿದೆ. ಗ್ರಾಮೀಣ ಉಪವಿಭಾಗದಲ್ಲಿ ಅಂದು ಬೆಳಿಗ್ಗೆ 11 ಗಂಟೆಗೆ ನಡೆಯುವ ಕುಂದುಕೊರತೆ ಸಭೆಯಲ್ಲಿ ವಿದ್ಯುತ್ ಗ್ರಾಹಕರು ಭಾಗವಹಿಸಿ ತಮ್ಮ ಅಹವಾಲು ಸಲ್ಲಿಸಬಹುದು ಎಂದು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ತಿಪ್ಪೇಸ್ವಾಮಿಗೆ ಒಲಿದ ಅಧ್ಯಕ್ಷ ಗಾದಿ

## ಬಿಡಿಸಿಸಿ ಬ್ಯಾಂಕ್‌ಗೆ ಅಧ್ಯಕ್ಷರಾಗಿ ಕೆ.ತಿಪ್ಪೇಸ್ವಾಮಿ, ಉಪಾಧ್ಯಕ್ಷರಾಗಿ ಐ.ದಾರುಕೇಶ ಅವಿರೋಧ ಆಯ್ಕೆ | ಅಂತ್ಯಗೊಂಡ ಆಯ್ಕೆ ಪ್ರಹಸನ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಕೂಡ್ಲಿಗಿ ತಾಲೂಕಿನ ಕೆ.ತಿಪ್ಪೇಸ್ವಾಮಿ, ಉಪಾಧ್ಯಕ್ಷರಾಗಿ ಕೊಟ್ಟೂರು ತಾಲೂಕಿನ ಐ.ದಾರುಕೇಶ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ-ಉಪಾಧ್ಯಕ್ಷ ಆಯ್ಕೆ ಮೂರನೆ ಸುತ್ತಿನ ಆಯ್ಕೆ ಸಭೆಯಲ್ಲಿ ಶಾಂತಿಯುತವಾಗಿ ಅವಿರೋಧ ಆಯ್ಕೆ ನಡೆಯಿತು. ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿ ನಿರ್ದೇಶಕರಾದ ಕೆ.ತಿಪ್ಪೇಸ್ವಾಮಿ ಮತ್ತು ಚೊಕ್ಕಾಬಸವನಗೌಡ ನಾಮಪತ್ರ ಸಲ್ಲಿಸಿದ್ದರು. ಗದ್ದುಗೆಗಾಗಿ ಇಬ್ಬರ ನಡುವೆ ತೀವ್ರ ಪೈಪೋಟಿ, ತೆರೆಮರೆಯ ಕಸರತ್ತು ಬಲುಜೋರಾಗಿ ನಡೆದಿತ್ತು. ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳಾಗಿ ನಿರ್ದೇಶಕರಾಗಿ ಪಿ.ಮೂಕಯ್ಯಸ್ವಾಮಿ ಮತ್ತು ಐ.ದಾರುಕೇಶ ನಾಮಪತ್ರ ಸಲ್ಲಿಸಿದ್ದರು. ಅಧಿಕಾರಕ್ಕಾಗಿ ಸಹಕಾರಿ ಕ್ಷೇತ್ರದಲ್ಲಿನ ನಿರ್ದೇಶಕರು ಎರಡು ಬಣಗಳಾಗಿ ಬಿಂಬಿಸಿಕೊಂಡಿದ್ದರು.

ನ.11ರ ಮೊದಲನೆ ಆಯ್ಕೆ ಸಭೆಯಲ್ಲೇ ಕೆ.ತಿಪ್ಪೇಸ್ವಾಮಿ ಅವರು ಆಯ್ಕೆಯಾಗುವ ಎಲ್ಲಾ ಲಕ್ಷಣಗಳಿದ್ದರೂ. ಪ್ರತಿ ಸ್ಪರ್ಧಿ ಆಕಾಂಕ್ಷಿ ಚೊಕ್ಕಬಸವನಗೌಡ ಬಣ ಅಂದು ನಾಮಪತ್ರ ಸಲ್ಲಿಸಿ ಆಯ್ಕೆ ಸಭೆಗೆ ಗೈರಾಗಿದ್ದರಿಂದ ಕೋರಂ ಕೊರತೆ ಕಾರಣದಿಂದಾಗಿ ಆಯ್ಕೆ ಮುಂದೂಡಲಾಗಿತ್ತು. ನಂತರ ನ.18 ರಂದು ನಡೆದ ಎರಡನೆ ಸಭೆಗೆ ಎರಡೂ ಬಣದವರು ವರಿಷ್ಠರ ಭೇಟಿಗಾಗಿ ತೆರಳಿದ್ದರಿಂದ ಸರ್ವರೂ ಗೈರಾಗಿದ್ದರು. ಮೂರನೆ ಅವಧಿಗೆ ಗೈರಾದರೆ, ಸಹಕಾರಿ ನಿಯಮಾನುಸಾರ ಅನರ್ಹತೆಯ ತೂಗುಗತ್ತಿ ಎದುರಾಗಬಹುದೆಂದು ಎಚ್ಚೆತ್ತುಕೊಂಡ ಎರಡನೇ ಬಾರಿಗೆ ಗೈರಾದ ನಿರ್ದೇಶಕರು ಮೂರನೆ ಆಯ್ಕೆ ಸಭೆಗೆ ಮಾನಸಿಕವಾಗಿ ಮತ್ತು ವರಿಷ್ಠರ ಸೂಚನೆಯ ಹೊಂದಾಣಿಕೆಯ ಸೂತ್ರಕ್ಕೆ ಸಿದ್ಧರಾಗಿ ಹಾಜರಾಗಿದ್ದರು.



ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ನಿರ್ದೇಶಕ ಚೊಕ್ಕಾಬಸವನಗೌಡ ಮತ್ತು ಉಪಾಧ್ಯಕ್ಷ ಸ್ಥಾನ ಆಕಾಂಕಿಯಾಗಿದ್ದ ಪಿ.ಮೂಕಯ್ಯಸ್ವಾಮಿ ನಾಮಪತ್ರ ಹಿಂಪಡೆದಿದ್ದರಿಂದ ಅಧ್ಯಕ್ಷ, ಉಪಾಧ್ಯಕ್ಷ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿ ವಿಶ್ವಜಿತ ಮೆಹತಾ ಘೋಷಿಸಿದರು. ನೂತನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಅಭಿಮಾನಿಗಳು ಹೂವಿನ ಹಾರ ಹಾಕಿ, ಹೆಗಲಮೇಲೆತ್ತಿಕೊಂಡು ಕುಣಿದು ಜಯಘೋಷ ಕೂಗಿ ಸಂಭ್ರಮಿಸಿದರು.





**ನಿರ್ದೇಶಕರು :** ಬಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಗೆ ಈಗಾಗಲೇ 14 ನಿರ್ದೇಶಕರು ಆಯ್ಕೆಯಾಗಿದ್ದು, ಅಪೇಕ್ಸ್ ಬ್ಯಾಂಕ್ ಮತ್ತು ಸರ್ಕಾರದ ಪ್ರತಿನಿಧಿಯಾಗಿ ತಲಾ ಒಬ್ಬರು ನಿರ್ದೇಶಕರು ಸೇರಿ ಒಟ್ಟು 16 ನಿರ್ದೇಶಕರಿದ್ದಾರೆ. ಎಲ್.ಎಸ್.ಆನಂದ, ಪಿ.ಮೂಕಯ್ಯಸ್ವಾಮಿ, ಎಲ್.ಬಿ.ಪಿ. ಭೀಮಾನಾಯ್ಕ, ಚಿದಾನಂದ ಐಗೋಲ, ಕೆ.ತಿಪ್ಪೇಸ್ವಾಮಿ, ಐ.ದಾರುಕೇಶ, ವೈ.ಅಣ್ಣಪ್ಪ, ಬಿ.ನವೀನ್‌ಕುಮಾರ್ ರೆಡ್ಡಿ, ಹುಲುಗಪ್ಪ ನಾಯಕರ, ಚೊಕ್ಕಾಬಸವನಗೌಡ, ಜೆ.ಎಂ.ಶಿವಪ್ರಸಾದ, ವಿ.ಆರ್.ಸಂದೀಪ್‌ಸಿಂಗ್, ಪಿ.ವಿಶ್ವನಾಥ, ಲತಾ ಮಲ್ಲಿಕಾರ್ಜುನ ಆಯ್ಕೆಯಾಗಿದ್ದಾರೆ. ಅಪೇಕ್ಸ್ ಬ್ಯಾಂಕಿನ ಪ್ರತಿನಿಧಿಯಾಗಿ ಜಗದೀಶ.ಎಲ್., ಸರ್ಕಾರದ ಪ್ರತಿನಿಧಿಯಾಗಿ ಸಹಕಾರ ಸಂಘಗಳ ಉಪನಿಬಂಧಕ ಬೇರುಂಡದಾರ ಎ.ಕೇಸರಿಮಠ ಆಡಳಿತ ಮಂಡಳಿಯ ನಿರ್ದೇಶಕಾಗಿದ್ದಾರೆ.

# ನಟ ಡಾ.ವಿಷ್ಣುವರ್ಧನ್ ಪುಣ್ಯಭೂಮಿ ಹೋರಾಟಕ್ಕೆ ಬೆಂಬಲ




■ ಹಂಪಿ ಟೈಮ್ಸ್ ಹೊಸಪೇಟೆ

ಡಾ.ವಿಷ್ಣುವರ್ಧನ ಅಭಿಮಾನಿಗಳ ಸಂಘಗಳ ಒಕ್ಕೂಟದಿಂದ ಡಿ.17 ರಂದು ಬೆಂಗಳೂರಿನ ಫ್ರೀಡಂ ಪಾರ್ಕಿನಲ್ಲಿ ಹಮ್ಮಿಕೊಂಡಿರುವ ಪುಣ್ಯಭೂಮಿ ಹೋರಾಟಕ್ಕೆ ವಿಜಯನಗರ ಜಿಲ್ಲೆಯ ಡಾ.ವಿಷ್ಣುವರ್ಧನ ಸೇನಾ ಸಮಿತಿ ಬೆಂಬಲವಿದ್ದು, ಬೆಂಗಳೂರಿನಲ್ಲಿ ನಡೆಯುವ ಹೋರಾಟದಲ್ಲಿ ಪಾಲ್ಗೊಳ್ಳಲಿದ್ದೇವೆ ಎಂದು ಸೇನಾ ಸಮಿತಿಯ ಅಧ್ಯಕ್ಷ ಬಿ.ಪಂಪಾಪತಿ ತಿಳಿಸಿದರು.

ನಗರದ ಶ್ರೀ ಬಸವೇಶ್ವರ ವೃತ್ತದಲ್ಲಿ ಬಸವೇಶ್ವರ ಕಂಚಿನ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಹೋರಾಟದ ಬಿತ್ತಿಪತ್ರ ಹಿಡಿದು ಮಾತನಾಡಿದರು. ಕನ್ನಡಮ್ಮನ ಕುವರ, ಕೋಟ್ಯಾಂತರ ಕನ್ನಡಿಗರ ಮನಗೆದ್ದ ಯಜಮಾನ ಡಾ.ವಿಷ್ಣುವರ್ಧನ್ ಅವರ ಸ್ಮಾರಕ ನಿರ್ಮಾಣಕ್ಕೆ ಇದೂವರೆಗೂ ಸರ್ಕಾರ ತುಂಡು ಭೂಮಿಯನ್ನು ನೀಡಿಲ್ಲ. ಹೆಸರಾಂತ ಕಲಾವಿದರಾಗಿ ಕನ್ನಡ ನಾಡಿಗೆ ಅಪಾರ ಕಲೆಯ ಕೊಡುಗೆ ನೀಡಿದ್ದಾರೆ. ಯುವಕರಿಗೆ ಸ್ಫೂರ್ತಿಯಾಗಿದ್ದಾರೆ. ಸನ್ಮಾರ್ಗದಲ್ಲಿ ನಡೆಯುವ ದಾರಿ ತೋರಿದ ನಟನಿಗೆ ಸರ್ಕಾರ ಸ್ಮಾರಕ ನಿರ್ಮಾಣಕ್ಕೆ ಭೂಮಿ ನೀಡಿ, ಸ್ಮಾರಕ ನಿರ್ಮಿಸಬೇಕು ಎಂಬುದು ಅಭಿಮಾನಿಗಳ ಒತ್ತಾಸೆಯಾಗಿದೆ. ಸರ್ಕಾರ ಕೂಡಲೆ ಅಭಿಮಾನಿಗಳ ಹೋರಾಟಕ್ಕೆ ಸ್ಪಂದಿಸಬೇಕು. ಡಾ.ವಿಷ್ಣುವರ್ಧನ ಅಭಿಮಾನಿಗಳ ಶಾಂತಿಯುತ ಹೋರಾಟವನ್ನು ಸರ್ಕಾರ ಕಡೆಗಣಿಸದೆ ಭೂಮಿ ನೀಡಿ ಅಗಲಿದ ಕಲಾವಿದನಿಗೆ ಗೌರವ ಸಲ್ಲಿಸಬೇಕು ಎಂದು ಆಗ್ರಹಿಸಿದರು. ಸೇನಾ ಸಮಿತಿಯ ಬಿ.ಚಂದ್ರಶೇಖರ, ಪಿ.ಪರಶುರಾಮ, ಜಗನ್ನಾಥ, ಬಲ್ಲೂರೇಶ, ಎಸ್.ರಾಘವೇಂದ್ರ, ವೀರೇಶ, ಕಿಟ್ಟಿ, ಜಗದೀಶ್ ಪಾಟೀಲ್, ಭವನ್ ಇತರರು ಇದ್ದರು.

# ನೀರು ಸರಬರಾಜು ದರಪಟ್ಟಿ ಕೊಡಿ

## ಟ್ಯಾಂಕರ್ ಮಾಲೀಕರಿಗೆ ತಹಶಿಲ್ದಾರ ಅಮರೇಶ್ ಜಿ.ಕೆ ಸೂಚನೆ

■ ಹಂಪಿ ಟೈಮ್ಸ್ ಕೊಟ್ಟೂರು

2023-24ನೇ ಸಾಲಿನ ವರ್ಷವನ್ನು ಕೊಟ್ಟೂರು ಬರಪೀಡಿತ ತಾಲೂಕು ಎಂದು ಘೋಷಣೆಯಾಗಿರುವ ಹಿನ್ನೆಲೆ ಮುಂಬರುವ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸುವ ಗ್ರಾಮಕ್ಕೆ ಶುದ್ಧ ನೀರು ಸರಬರಾಜು ಮಾಡಲು ಇಚ್ಛಿಸುವ ಕೊಟ್ಟೂರು ತಾಲೂಕಿನ ಆಸಕ್ತ ಜಿ.ಪಿ.ಎಸ್. ಅಳವಡಿತ ಟ್ಯಾಂಕರ್ಗಳ ಮಾಲಿಕರು ತಮ್ಮ ದರಪಟ್ಟಿಯನ್ನು ಈ 15 ದಿನದೊಳಗೆ ಕೆಳಗಿನವರಿಗೆ ಸಲ್ಲಿಸಲು ತಹಶಿಲ್ದಾರರು ಅಮರೇಶ್ ಜಿ.ಕೆ ತಿಳಿಸಿದ್ದಾರೆ.

ಟ್ಯಾಂಕರ್ ಗಳ ಮಾಲಿಕರು ತಮ್ಮ ದರಪಟ್ಟಿಯನ್ನು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕೂಡ್ಲಿಗಿ ಅಥವಾ ತಹಶೀಲ್ದಾರರು ತಾಲೂಕು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ಈ ಕಾರ್ಯ ಚಟುವಟಿಕೆಯನ್ನು ಭೂಮಿ ಮಾನಿಟೇರಿಂಗ್ ಅಭಿವೃದ್ಧಿಪಡಿಸಿರುವ "ಸೆಲ್ ಟ್ಯಾಂಕರ್ ಯುಟಿಲೇಜೇಷನ್ ಆಫ್" ಬಳಸಿ ದತ್ತಾಂಶವನ್ನು ಸಂಗ್ರಹಿಸಲಾಗುವುದು, ಇಲ್ಲಿ ತಹಶೀಲ್ದಾರರು ಹಾಗೂ ಸದಸ್ಯರು, ಕಾರ್ಯದರ್ಶಿಗಳು, ಕೊಟ್ಟೂರು ತಾಲೂಕು ಬರಗಾಲ ಟಾಸ್ಕ್ ಪೋರ್ಸ್ ಸಮಿತಿ ಕಾರ್ಯನಿರ್ವಾಹಿಸಲಿದೆ ಎಂದು ತಿಳಿಸಲಾಗಿದೆ.

# ಇಂದು ಆವಂತಿ ಲಾಂಚ್ ಡೇ ಕಾರ್ಯಕ್ರಮ

## ಟಿಎಂಎಇಎಸ್ ಅಕಾಡೆಮಿ ವತಿಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಕಾಲೇಜಿನ ವತಿಯಿಂದ ಡಿ.16 ರಂದು ಬೆಳಿಗ್ಗೆ 10 ಗಂಟೆಗೆ ಇಲ್ಲಿನ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಆವಂತಿ ಲಾಂಚ್ ಡೇ ಕಾರ್ಯಕ್ರಮ ನಡೆಯಲಿದೆ. ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ್ ಕಾಮರ್ಸ್ ಕಾಲೇಜು ಸ್ಪರ್ಧಾತ್ಮಕ ತರಬೇತಿ ಸಂಸ್ಥೆಗಳಾದ ಡೆಲ್ಲಿಯ 'ಆವಂತಿ' ಮತ್ತು ಬೆಂಗಳೂರಿನ ಪ್ರೋ-ಎಡ್ಜ್ ಸಂಸ್ಥೆಗಳ ಸಹಯೋಗ ಪಡೆದುಕೊಂಡಿದ್ದು, ಆವಂತಿ ಲಾಂಚ್ ಡೇ ಕಾರ್ಯಕ್ರಮವನ್ನು ಆಯೋಜಿಸಿದೆ. ಶಾಲಾ ಶಿಕ್ಷಣ ಇಲಾಖೆಯ ವಿಜಯನಗರ ಜಿಲ್ಲಾ ಉಪನಿರ್ದೇಶಕ ಯುವರಾಜ್ ನಾಯಕ್ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಶಾಲಾ ಶಿಕ್ಷಣ ಇಲಾಖೆ ಪದವಿಪೂರ್ವ ವಿಭಾಗದ ವಿಜಯನಗರ ಜಿಲ್ಲಾ ನೋಡಲ್ ಅಧಿಕಾರಿ, ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘದ ಅಧ್ಯಕ್ಷರಾದ ನಾಗರಾಜ್ ಹವಾಲ್ದಾರ್, ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಚೆನ್ನಬಸಪ್ಪ ಅವರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಹರಪನಹಳ್ಳಿ ತೆಗ್ಗಿನಮಠ ಸಂಸ್ಥೆಯ ಉಪಕಾರ್ಯದರ್ಶಿ ಟಿ.ಎಂ. ವಿಜಯಕುಮಾರ್, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಎಂ.ಕೆ. ರವೀಂದ್ರ, ಕಾಲೇಜಿನ ಪ್ರಾಚಾರ್ಯರು ಹಾಗೂ ಬೋಧಕ ಸಿಬ್ಬಂದಿ, ಡಿಎವಿ ಪಬ್ಲಿಕ್ ಸ್ಕೂಲ್ ಹಾಗೂ ರೋಜಬಡ್ ಶಾಲೆಗಳ ಮುಖ್ಯೋಪಾಧ್ಯಾಯರು ಉಪಸ್ಥಿತಿ ಇರಲಿದ್ದಾರೆ. ನಗರದ ಇತರೆ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಹಾಗೂ ಪಾಲಕ ಪೋಷಕರು ಭಾಗವಹಿಸುವರು. 'ಆವಂತಿ' ಸ್ಪರ್ಧಾತ್ಮಕ ತರಬೇತಿ ಸಂಸ್ಥೆಯ ಶೈಕ್ಷಣಿಕ ವಿಭಾಗದ ಮುಖ್ಯಸ್ಥ ಪ್ರದೀಪ್ ಶೆಟ್ಟಿ ಅವರು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ನೀಟ್, ಜೆಇಇ, ಕೆ-ಸಿಇಟಿ ಸ್ಪರ್ಧಾತ್ಮಕ ಪರೀಕ್ಷೆಗಳ ಮಹತ್ವದ ಬಗ್ಗೆ ಮಾಹಿತಿ ತಿಳಿಸಿ, ಎಸ್‌ಎಸ್‌ಎಲ್ ಸಿ ನಂತರ ಮುಂದೇನು? ವಿಷಯ ಕುರಿತು ವಿಶೇಷ ಉಪನ್ಯಾಸ ನೀಡುವರು. ಅಲ್ಲದೆ, ಪ್ರೋ-ಎಡ್ಜ್ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಫಯಾಜ್ ಅಹ್ಮದ್ ಅವರು ಸಿಎ/ಸಿಎಸ್ ಫೌಂಡೇಶನ್ ಸ್ಪರ್ಧಾತ್ಮಕ ಪರೀಕ್ಷೆಗಳ ಉಪಯುಕ್ತತೆ ಕುರಿತು ಉಪನ್ಯಾಸ ನೀಡುವರು ಎಂದು ಆಯೋಜಕರು ತಿಳಿಸಿದ್ದಾರೆ.


T.M.A.E. SOCIETY
HARAPANAHALLI
T.M.A.E.S.
RESIDENTIAL PU COLLEGE
SCIENCE - PCMB / PCMC
COMMERCE -EBAS / EBACs / BASCs
Call Now for more information:
9483510530, 6366437712
We are Good at
• Having dynamic and experience faculties
• Best Study Material
• Regualar Mock Test & Assignments
Fecilities
• Separate Hostel Facility for Boys & Girls with hygienic food
• Mentoring System for holystic progress of Child
• Transport facility available
DAV Campus Sanklapur Ballari Road Hosapete-583201
In Collaboration with
Avanti
IIT-JEE | NEET | Foundation

## ವಚನ ಅರಿವು

### ಪ್ರಾರ್ಥನೆ

**ನಾ ಹುಟ್ಟಿದಲ್ಲಿ ಸಂಸಾರ ಹುಟ್ಟಿತ್ತು.**
**ಸಂಸಾರ ಹುಟ್ಟಿದಲ್ಲಿ ಅಜ್ಞಾನ ಹುಟ್ಟಿತ್ತು.**
**ಅಜ್ಞಾನ ಹುಟ್ಟಿದಲ್ಲಿ ಆಶೆ ಹುಟ್ಟಿತ್ತು.**
**ಆ ಕೋಪಾಗ್ನಿಯ ತಾಮಸಧೂಮ್ರ ಮುಸುಕಿನಲ್ಲಿ.**
**ನಾ ನಿಮ್ಮ ಮರೆದು ಭವದುಃಖಕ್ಕೀಡಾದೆ.**
**ನೀ ಕರುಣದಿಂದೆತ್ತಿ ಎನ್ನ ಮರಹ ವಿಂಗಡಿಸಿ,**
**ನಿಮ್ಮ ಪಾದವನರುಹಿಸಯ್ಯಾ, ಚೆನ್ನಮಲ್ಲಿಕಾಜುನಾ!**

**– ಅಕ್ಕಮಹಾದೇವಿ**

ಆತ್ಮೋನ್ನತಿಗಾಗಿ ಸಾಧನ ಮಾರ್ಗವಿಡಿದ ಸಾಧಕ ಅಥವ ಭಕ್ತ ಲೌಖಿಕ ಜೀವನದಲ್ಲಿ ವಾಸ್ತವವಾಗಿ ಬದುಕಬೇಕು ಭ್ರಮೆಯಿಂದಲ್ಲ. ಭ್ರಮೆ ದುಃಖಕ್ಕೀಡು ಮಾಡುವಂತಹದ್ದು. ಶರಣರು ಸಂಸಾರವನ್ನು ತ್ಯಜಿಸಿ ಆಧ್ಯಾತ್ಮ ಸಾಧನೆ ಮಾಡಬೇಕು ಎಂಬುದನ್ನು ಒಪ್ಪುವುದಿಲ್ಲ. ಸಂಸಾರ ಜೀವನದಲ್ಲಿ ಇದ್ದು ಅದರಿಂದ ಬೇರ್ಪಟ್ಟು ಅನುಭಾವದ ಸ್ಥಿತಿಗೆ ತಲುಪುವುದನ್ನು ಮನಗಂಡಿದ್ದರು. ಅಕ್ಕ ಈ ವಚನದಲ್ಲಿ ಸಂಸಾರ ಜೀವನಕ್ಕೆ ಮನುಷ್ಯ ಸೀಮಿತಗೊಳ್ಳುವ ಬಗೆಯನ್ನು ವಿವರಿಸುತ್ತಾಳೆ. ಮನುಷ್ಯನಿಗೆ ತನ್ನ ಬಗ್ಗೆ ತನಗೆ ಭ್ರಮೆ, ಮೋಹ ಉಂಟಾದ ತಕ್ಷಣ ಅವನಿಗೆ ಸಂಸಾರದ ಮೋಹ ಹುಟ್ಟುತ್ತದೆ. ಹೆಂಡತಿ, ಮಕ್ಕಳು, ಮಾನ, ಆಸ್ತಿಪಾಸ್ತಿ ಮುಂತಾದ ಲೌಕಿಕ ಸುಖದ ಬೆನ್ನು ಹತ್ತುತ್ತಾನೆ. ಇಂತಹ ಆಸೆ, ಆಮಿಷಗಳಿಂದ ಹೊರಬರಲಾರದೆ, ಅರಿವಿನ ದಾರಿ ಕಾಣದೆ ತಾನು ಬೇರೆ ತನ್ನಾತ್ಮದ ಅರಿವು ಬೇರೆ ಬೇರೆಯಾಗಿ ತನ್ನ ಭ್ರಾಂತಿಯಿಂದ ಆಶೆ ಹುಟ್ಟಿ, ಕೋಪ ಹುಟ್ಟಿ, ಕತ್ತಲೆಯ ಮದ ಮುಸುಕಿ, ನಿಮ್ಮನ್ನು ಅಂದರೆ ಜ್ಞಾನವನ್ನು ಕಾಣಲು ಸಾಧ್ಯವಾಗುತ್ತಿಲ್ಲ. ಈ ಭವ ಬಂಧನದ ಅಜ್ಞಾನದಿಂದ ಪಾರುಮಾಡಿ ನಿನ್ನ ಅರಿವಿನ ಸುಖದಲ್ಲಿರಿಸು ಎಂದು ಕೇಳುತ್ತಾಳೆ ಅಕ್ಕ.

**(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)**




## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ಹಳ್ಳಿಗಳ ಮೌಲ್ಯಗಳು ಬದುಕಿನ ಪಾಠವಾಗಲಿ




**ಡಾ.ಪರಮೇಶ್ವರಯ್ಯ ಸೊಪ್ಪಿಮಠ**
ಶಿಕ್ಷಕರು
soppi.mata@gmail.com

ತಾಯಿಯೇ ಮೊದಲ ಗುರು, ಮನೆಯೇ ಮೊದಲ ಪಾಠಶಾಲೆ. ಹೀಗಿರುವಾಗ ಇಂದಿನ ತಾಯಂದಿರು ತಮ್ಮ ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ರೂಪಿಸುವಲ್ಲಿ ಯಾವ ಪಾತ್ರ ವಹಿಸಿದ್ದಾರೆ?. ಮಗುವಿನ ಸರ್ವಾಂಗೀಣ ಬೆಳವಣಿಗೆ ಎಂದರೆ ಅವರ ಶಾರೀರಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ, ಆತ್ಮಿಕ, ಹಾಗು ಆತ್ಮಸ್ಥೈರ್ಯದ ವಿಕಾಸವೇ ಆಗಿದೆ. ಆದರೆ ಇಂದಿನ ತಂದೆ ತಾಯಂದಿರು ತಮ್ಮ ಮಕ್ಕಳ ಶೈಕ್ಷಣಿಕ ಬೆಳವಣಿಗೆಯೇ ಸರ್ವಸ್ವ ಎಂದು ತಿಳಿದುಕೊಂಡಿದ್ದಾರೆ. ಬಹತೇಕ ಪಾಲಕರಲ್ಲಿರುವ ತಪ್ಪು ಕಲ್ಪನೆಯೇ ಇದಕ್ಕೆ ಕಾರಣ. ಟ್ಯೂಷನ್, ಶಾಲೆ, ಹೊಂ ವರ್ಕ್, ಸಮ್ಮರ್‌ಕ್ಯಾಂಪ್‌ಗಳ ಒತ್ತಡದಲ್ಲಿ ಇದರ ಹೊರತಾದ ಲೋಕವಿದೆ ಎಂಬುದೇ ಬಹುತೇಕ ಮಕ್ಕಳಿಗೆ ಗೊತ್ತೇ ಇಲ್ಲ. ಪಾಲಕರು ಇನ್ನಾದರೂ ಜಾಗೃತರಾಗಬೇಕಿದೆ. ಮಕ್ಕಳ ಬಾಲ್ಯವು ಸಂತಸ, ಸುಮಧುರ ಮತ್ತು ಜೀವನದ ಸವಿ ನೆನಪಾಗಿ ಉಳಿವಂತೆ ಮಾಡುವುದಕ್ಕೆ ಆದ್ಯತೆ ನೀಡಬೇಕಿದೆ. ಇದಕ್ಕೆ ಬೆಂಬಲ ನೀಡುವಂತಹ ಕೆಲವು ಅಂಶಗಳನ್ನು ವಿಶೇಷವಾಗಿ ಪರಿಗಣಿಸಬಹುದಾಗಿದೆ.

ಮಕ್ಕಳ ಬಾಲ್ಯ ಸುಂದರ ಕನಸು ಕನಸಾಗಿಯೇ ಉಳಿಯಬಾರದು. ಮಕ್ಕಳ ಬಾಲ್ಯದ ಕನಸುಗಳನ್ನು ಕಡೆಗಣಿಸುವ ದೊಡ್ಡವರು ತಮ್ಮ ಅಪೂರ್ಣ ಆಸೆ–ಮಹತ್ವಕಾಂಕ್ಷೆಗಳನ್ನು ಮಕ್ಕಳ ಮೇಲೇರುತ್ತಿರುವುದು ನಿಜಕ್ಕೂ ಅಮಾನವೀಯ. ಇಂತಹ ಅಸಹಜ ಚಟುವಟಿಕೆಗಳಿಂದ ಮಕ್ಕಳ ಮನಸ್ಸಿನ ಮೇಲೆ ಆಗುವ ಆಘಾತಕ್ಕೆ ಪಾಲಕರೇ ಹೊಣೆಗಾರರು. ಮಕ್ಕಳ ಬಾಲ್ಯವನ್ನು, ಅವರ ಅಭಿರುಚಿ, ಯೋಚನಾ ಲಹರಿಯ ಅಭಿವ್ಯಕ್ತಿಯಲ್ಲಿ ನಮಗೆ ಬೇಕಾದಂತೆ ಕಲಬೆರಕೆ ಮಾಡುವುದು ಸರಿಯಲ್ಲ. ಅವರನ್ನು ಕೃತಕ ಅನುಕರಣೆಯತ್ತ ತಳ್ಳದೆ ನೈಜತೆಯ ಸ್ವಚ್ಚಂದ ಬಾನಿನಲ್ಲಿ ಹಾರಡಲು ಬಿಡುವುದು ಹಿರಿಯರಾದ ನಮ್ಮೆಲ್ಲರ ಕರ್ತವ್ಯ.

ವಿದ್ಯಾರ್ಥಿಗಳು ವಿದ್ಯಾರ್ಥಿ ದಿಶೆಯಲ್ಲಿಯೇ ಸ್ಪರ್ಧಾತ್ಮಕತೆ ಮನೋಭಾವ ಬೆಳೆಸಿಕೊಳ್ಳುವಂತೆ ಮಾಡಬೇಕು. ಮಕ್ಕಳ ಮನಸ್ಸು ತಿಳಿ ನೀರಿನಂತೆ. ಅವರಿಗೆ ಯಾವುದೇ ಕೆಟ್ಟ ಆಲೋಚನೆಗಳಿರುವುದಿಲ್ಲ. ಮನಷ್ಯರನ್ನು ದ್ವೇಷಿಸುವುದಿಲ್ಲ. ಅವರಲ್ಲಿ ಯಾವುದೇ ದ್ವೇಷ ಅಸೂಯೆ ಇರುವುದಿಲ್ಲ. ನಾವೆಲ್ಲ ಒಂದೆ ಎಂಬ ಭಾವನೆ ಅವರಲ್ಲಿರುತ್ತದೆ. ಬೇರೆಯವರಿಗೆ ವಂಚನೆ ಮಾಡಬೇಕು. ಮೋಸ ಮಾಡಬೇಕು ಎನ್ನುವ ಕಲ್ಪನೆಯೂ ಇರುವುದಿಲ್ಲ.

ಮಕ್ಕಳ ಮನಸ್ಸಿನ ಭಾವನೆ ವಿಶಿಷ್ಟವಾದುದು. ನಗು, ಚೈತನ್ಯ, ಉತ್ಸಾಹವಿದಿದ್ದರೆ ಏನನ್ನಾದರೂ ಸಾಧಿಸಬಹುದು. ಮಕ್ಕಳು ಸದಾ ಉಲ್ಲಾಸ ಉತ್ಸಾಹದ ಬುಗ್ಗೆಯಾಗಿರುತ್ತಾರೆ. ಪ್ರತಿಯೊಂದು ಮಗುವಿನಲ್ಲೂ ಒಂದೊಂದು ವಿಶಿಷ್ಟ ಗುಣಗಳಿರುತ್ತವೆ. ಪಾಲಕರು ಆ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಉತ್ತಮ ಸಾಧನೆ ಮಾಡುವ ಮೂಲಕ, ಸಮಾಜದಲ್ಲಿ ಉನ್ನತ ವ್ಯಕ್ತಿಗಳಾಗಿ ರೂಪಗೊಳ್ಳುತ್ತಾರೆ. ಕೇವಲ ಗೆಲುವಿನ ಆಧಾರದಮೇಲೆ ತಮ್ಮ ಮಕ್ಕಳ ಯೋಗ್ಯತೆ, ಅರ್ಹತೆ, ಪ್ರತಿಭೆಯನ್ನು ಅಳತೆ ಮಾಡಬಾರದು. ಆದರೆ ವಾಸ್ತವದಲ್ಲಿ ಇದಕ್ಕೆ ಬೆಲೆಯೇ ಇಲ್ಲ.

ಟಿ.ವಿ.ಯನ್ನೇ ಮಾದರಿಯಾಗಿ ಪರಿಗಣಿಸಲಾಗುತ್ತಿದೆ. ವಿಷಾದನೀಯ ಸಂಗತಿ ಎಂದರೆ ಸುಳ್ಳಿನ ಅರಮನೆ ಕಟ್ಟುವ ಟಿವಿಯ ಜಾಹೀರಾತುಗಳನ್ನು ನೋಡಿ, ಆರೋಗ್ಯವನ್ನು ಹೆಚ್ಚಿಸುತ್ತವೆ ಎಂಬ ಭ್ರಮೆಯಿಂದ ಮಕ್ಕಳಿಗೆ ಹೆಚ್ಚಿನ ಬೆಲೆಯ ಆಹಾರ ಪದಾರ್ಥ, ಪಾನೀಯಗಳ ಹಿಂದೆ ಪೋಷಕರು ಬಿದ್ದಿದ್ದಾರೆ. ಅವುಗಳ ಸೇವನೆ ಮಾಡಿದರೆ ಮಾತ್ರ ತಮ್ಮ ಮಕ್ಕಳು ವಿಶೇಷವಾದದನ್ನು ಸಾಧಿಸಬಲ್ಲರು ಎಂಬ ಭ್ರಮೆಯನ್ನು ಜಾಹೀರಾತುಗಳಲ್ಲಿ ಬರುವ ಸೆಲೆಬ್ರಿಟಿಗಳನ್ನು ನೋಡಿ ಅನುಕರಿಸಲು ಹೋಗುತ್ತಿದ್ದಾರೆ. ಒಂದು ನೆನಪು ಮಾಡಿಕೊಳ್ಳೋಣ ಹಿಂದಿನ ಕಾಲದಲ್ಲಿ ಮಕ್ಕಳು ಆಧುನಿಕ ಆಹಾರ ಸಾಮಾಗ್ರಿಗಳಿರದೆ ರಾಗಿಗಂಜಿಯಂತಹ ಪಾನೀಯಗಳನ್ನು ಕುಡಿದು ಏನೇಲ್ಲಾ ಸಾಧನೆ ಮಾಡಿದ್ದಾರೆ ಅಲ್ಲವೇ?. ಈ ಅಂಶವನ್ನು ಪಾಲಕರು ಪರಿಗಣಿಸುತ್ತಿಲ್ಲ. ಜೊತೆಗೆ ರಿಯಾಲಿಟಿ ಶೋಗಳ ಬಗ್ಗೆ ನಮ್ಮನ್ನು ನಾವೇ ದೂಷಿಸಿಕೊಳ್ಳಬೇಕು. ಅದು ಖಂಡಿತವಾಗಿ ನಮಗೆ ಮಾದರಿಯಲ್ಲ. ಅಡ್ಡದಾರಿಗಳು ಎಂದೂ ನಮ್ಮನ್ನು ದಡ ಸೇರಿಸುವುದಿಲ್ಲ ಎಂಬುದು ಸದಾ ಸ್ಪಷ್ಟವಿರಲಿ.

ಹಳ್ಳಿಯ ಮೌಲ್ಯಗಳು ಬದುಕಿನ ಪಾಠವಾಗಬೇಕಿದೆ. ಇರುವೆಗಳ ಗೂಡು, ಪ್ರಾಣಿ ಪಕ್ಷಿಗಳ ಬದುಕಿನ ಕೌತುಕ, ಮೊಳಕೆ ಒಡೆದ ಬೀಜ, ಆಗ ತಾನೆ ಚಿಗುರಿದ ಎರಡೆಲೆಗಳು, ಹಾರುವ ದುಂಬಿಗಳು, ಹಾಡುವ ಪಕ್ಷಿಗಳು, ಹರಿಯುವ ನದಿ, ತುಂಬಿದ ಕೆರೆ, ಬೆಳೆದು ನಿಂತ ಪೈರು, ಭೂದೇವಿಯ ಸೊಗಸು, ರೈತನ ಬಾಳು, ದನ ಕರುಗಳು ಮೇಯುವ ವಿಧಾನ ಇವೆಲ್ಲಾ ಯಾವ ಫ್ಯಾಂಟಸಿ ಪಾರ್ಕ್‌ನಲ್ಲೂ ಮಕ್ಕಳಿಗೆ ಸಿಗಲಾರವು.

ರೊಟ್ಟಿ, ಚಟ್ನಿ, ಈರುಳ್ಳಿ ಜೊತೆಗಿನ ಊಟ, ಕೆನೆ ಮೊಸರಿನ ಸವಿ, ಮುದ್ದೆಯ ತಾಕತ್ತಿನ ಮುಂದೆ ಪಿಜ್ಜಾ, ಬರ್ಗರ್ ಏನೂ ಅಲ್ಲ ಎಂಬುದು ಮಕ್ಕಳಿಗೆ ತಿಳಿಯಬೇಕಿದೆ. ಹಳ್ಳಿಗಳಲ್ಲಿನ ಒಗ್ಗಟ್ಟು, ಅಲ್ಲಿನ ಶಿಸ್ತುಬದ್ಧ ಜೀವನ, ಸಹಕಾರದ ಬಾಳ್ವೆ, ಸದಾ ಸಹಾಯಕ್ಕೆ ಧಾವಿಸುವ ಗುಣ, ಪ್ರಕೃತಿಯಿಂದ ಅವರು ಕಲಿಯುವ ಪಾಠ, ಹಬ್ಬ ಹರಿದಿನಗಳ ಸೊಗಸು, ಮುಗ್ಧತೆಯಲ್ಲಿಯೆ ಅವರು ಅನುಭವಿಸುವ ಖುಷಿ, ಸಂಪೂರ್ಣವಾಗಿ ಹಳ್ಳಿಯೊಂದು ಮನೆಯಂತೆ ನಡೆದುಕೊಳ್ಳುವ ರೀತಿಯನ್ನು ಇಂದು ಮಕ್ಕಳು ಕಲಿತುಕೊಳ್ಳುವುದು ದೂರದ ಮಾತಾಗಿ ಪಾಲಕರ ಅಸಡ್ಡೆಯಿಂದ ನೋಡುವ ಸೌಭಾಗ್ಯವೂ ಇಲ್ಲದಾಗಿದೆ.

ಪ್ರಕೃತಿಯೊಂದಿಗೆ ಹೊಂದಿಕೊಂಡು ಅದನ್ನು ದೇವರೆಂದು ಪೂಜಿಸುವ ರೀತಿ, ಹಳ್ಳಿಯ ಜನರ ಪ್ರಕೃತಿಪರ ಕಾಳಜಿ, ಸೌಜನ್ಯ, ನಿಷ್ಠೆಯನ್ನು ಪ್ರತಿ ಮಕ್ಕಳೂ ಕಣ್ಣಾರೆ ನೋಡಬೇಕು. ನಮ್ಮ ಬದುಕಿಗೆ ಅನ್ನ ನೀಡಿ ಸಾಕುತ್ತಿರುವ ಈ ಹೊಲಗದ್ದೆಗಳು ಮತ್ತು ಅದರೊಳಗೆ ಒಂದಾಗಿ ದುಡಿಯುತ್ತಿರುವ ನೇಗಿಲಯೋಗಿಯ ಮುಂದೆ ಇನ್ನೋರ್ವ ಯೋಗಿ ಇಲ್ಲ ಎಂಬ ಸತ್ಯವನ್ನು ಮಗು ಅರಿಯಬೇಕು. ಮಕ್ಕಳಿಗೆ ಹಳ್ಳಿಗಳಲ್ಲಿನ ರೈತನ ಕಷ್ಟದ ಬದುಕನ್ನು ಪರಿಚಯಿಸಬೇಕು. ಮಳೆ ಬರದಿದ್ದರೆ, ಬೆಳೆ ನಾಶವಾದರೆ ತಮ್ಮ ಕತೆ ಮುಗಿಯಿತೆಂದು ಅವರೂ ಭಾವಿಸದೆ, ಮುಂದಿನ ಸುಂದರ



ದಿನಗಳಿಗೆ ಕಾಯುವ ಮನೋಭಾವ ಮಕ್ಕಳಿಗೆ ಪರಿಚಯವಾಗಬೇಕು. ಇಂದು ಮಳೆಯ ಅಭಾವದಿಂದ ಬರಿದಾದ ಕೆರೆ, ಒಣಗಿದ ಬೆಳೆ, ನೀರಿನ ಕೊರತೆಯಿಂದ ಪರಿತಪಿಸುವ ಪಶು ಪಕ್ಷಿಗಳನ್ನು ನೋಡಿದ ಮಗು ಮುಂದೆ ಜಲ ಸಂರಕ್ಷಣೆಗೆ ಮಾಡೆಲ್ ಆಗುವುದರಲ್ಲಿ ಅನುಮಾನವಿಲ್ಲ.

ಕಂಪ್ಯೂಟರ್ ಕುಟ್ಟುವುದು ಇಲ್ಲವೇ ಸ್ಟೆಥಸ್ಕೋಪ್ ಹಿಡಿಯುವುದೇ ಜೀವನದ ಮಹಾನ್ ಗುರಿಯೆಂದುಕೊಂಡ ಮಗುವು ರೈತನನ್ನು, ಹಳ್ಳಿಯ ಬದುಕನ್ನು ನೋಡಿ ಇನ್ನೊಬ್ಬರಿಗಾಗಿ ಬದುಕುವುದೇ ನಿಜವಾದ ಬದುಕು ಎಂದು ಅರಿತುಕೊಳ್ಳಬೇಕಿದೆ. ದುಡ್ಡು ಮಾಡುವುದೇ ಜೀವನದ ಗುರಿ ಎಂದು ಕೊಳ್ಳುತ್ತಾ, ತಮ್ಮ ವ್ಯಕ್ತಿತ್ವವನ್ನೇ ವ್ಯವಹಾರದ ಸರಕನ್ನಾಗಿಸಿಕೊಳ್ಳುವಂತೆ ಮಕ್ಕಳಿಗೆ ಪ್ರೇರಣೆ ನೀಡಲಾಗುತ್ತಿದೆ. ಆದರೆ ಯಾವ ಶಿಕ್ಷಣ ಕ್ರಮದಲ್ಲೂ ಸಿಗದ ಬದುಕಿನ ಪಾಠ ಮಕ್ಕಳಿಗೆ ಹಳ್ಳಿಯಲ್ಲಿ



ಸಿಗುತ್ತದೆ. ಹಳ್ಳಿ ಮತ್ತು ಹಳ್ಳಿಯೊಂದಿಗೆ ಬದುಕುವ ರೈತ ಮತ್ತು ಆತನ ಬದುಕು ಕಲಿಸಿಕೊಡುವ ಪಾಠವನ್ನು ಯಾವ ಪ್ರತಿಷ್ಠಿತ ವಿಶ್ವವಿದ್ಯಾಲಯವೂ ಕಲಿಸಿ ಕೊಡಲಾರದು ಎಂಬುದನ್ನು ಪೋಷಕರು ಮೊದಲು ಅರಿಯಬೇಕು.

ಮಣ್ಣಿನ ಮೇಲಿನ ಪ್ರೀತಿ ಹೆಚ್ಚಿಸಬೇಕಿದೆ. ಮಗುವಿನ ಕೈ ಮಣ್ಣುಮುಟ್ಟುವುದು ಹೋಗಲಿ ಕಾಲನ್ನೂ ಮಣ್ಣಿನ ಜೊತೆ ಪಾಲಕರು ಬೆರೆಸುತ್ತಿಲ್ಲ. ಮನೆಯಲ್ಲಿಯೇ ಚಪ್ಪಲಿಗಳನ್ನು ಹಾಕಿಕೊಳ್ಳುತ್ತಾ, ಮಣ್ಣನ್ನು ಮುಟ್ಟಿದರೆ ಕೈ ತೊಳೆಸಲು ಅವರು ಪಡುವ ಪರಿಪಾಟಲು ಹೇಳ ತೀರದು. ಮಣ್ಣು ಮಗುವಿನ ಶತ್ರು ಎಂಬ ಭಾವನೆ ಬಿತ್ತಲಾಗುತ್ತಿದೆ. ನಿಧಾನವಾಗಿ ಈ ನಗರ ಸಂಸ್ಕೃತಿ ಹಳ್ಳಿಗೂ ಪ್ರವೇಶ ಪಡೆಯುತ್ತಿದೆ. ಕೃಷಿಯಿಂದ ಕೈ ಕಾಲು ಗಲೀಜು ಆಗುತ್ತವೆ. ನಮ್ಮ ಕಾಲಕ್ಕೆ ಇದು ಸಾಕು. ನೀನು ಬರೀ ಓದುವುದನ್ನು ಮಾಡಿ ದೊಡ್ಡ ಆಫಿಸರ್ ಆಗು ಎಂದು ಹೊಲದಿಂದ ದೂರಮಾಡುತ್ತಾ ಬೇಸಾಯವಂತೂ ಬೇಡವೇ ಬೇಡ ಎನ್ನುವವರು ನಮ್ಮ ನಡುವೆ ಹೆಚ್ಚಾಗುತ್ತಿದ್ದಾರೆ.

ಅದರ ಬದಲಾಗಿ ಮಗುವಿಗೆ ಮಣ್ಣಿನಲ್ಲಿ ಆಡುವುದಕ್ಕೆ ಬಿಡಬೇಕು. ಆ ಮಣ್ಣಿನ ಸೊಬಗಿನ ಸವಿಗಂಪನ್ನು ಮಗು ಅನುಭವಿಸಲಿ. ಮಣ್ಣಿನಜೊತೆ ಅಡುವ ಮಕ್ಕಳೊಂದಿಗೆ ಬೆರೆಯುವುದಕ್ಕೆ ಅವಕಾಶ ಮಾಡಿಕೊಡಿ. ಆ ಮಕ್ಕಳ ಬದುಕಿನೊಂದಿಗೆ ಮಗು ತನ್ನ ಬದುಕನ್ನು ಹೋಲಿಸಿಕೊಳ್ಳಲಿ. ಬಿಸಿಲಿನಲ್ಲಿ ಬೆವರಿದಲ್ಲಿ ಬೆವರಹನಿಗಳ ಪರಿಚಯವಾಗುತ್ತದೆ. ಆಟವೆಂದರೆ ಕೇವಲ ಕ್ರಿಕೆಟ್ ಅಥವಾ ವಿಡಿಯೋ ಗೇಮ್ಸ್ ಅಂದುಕೊಂಡಿರುವ ಮಗುವು ಹಳ್ಳಿಯ ಆಟಗಳಾದ ಗೋಲಿ, ಬುಗರಿ, ಚಿನ್ನಿದಾಂಡು, ಮರಕೋತಿ, ಚೌಕಬಾರ ಆಟಗಳ ಸಂತಸವನ್ನು, ಅದರ ಹಿಂದಿರುವ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಿದೆ ಎಂಬುದನ್ನು ನಮ್ಮ ಪಾಲಕರು ತಿಳಿಯಬೇಕು.

ಮಕ್ಕಳೂ ಮಜಾ ಅನುಭವಿಸಲು ನಾವು ಅವಕಾಶ ನಿಡುತ್ತಿಲ್ಲ. ಅದಕ್ಕೆ ಬದಲಾಗಿ ನಮ್ಮ ಮಕ್ಕಳು ಹಮಾಲಿಯಂತೆ ದೊಡ್ಡ ದೊಡ್ಡ ಚೀಲದಲ್ಲಿ ಪುಸ್ತಕಗಳ ಹೊತ್ತು ಬೆನ್ನು ಬಾಗಿಸಿಕೊಳ್ಳುತ್ತಿದ್ದಾರೆ. ಪೋಷಕರ ಅವಸರಕ್ಕೆ ಊಟ ತಿಂಡಿಗಳು ತಿಂದರೂ ತಿನ್ನದಂತಾಗಿದೆ. ಭಾಷೆ–ಅಂತಸ್ತಿನ ನೆವದಲ್ಲಿ ಭಾವನೆಗಳನ್ನು ಕೊಂದು ಮೂಕರನ್ನಾಗಿಸಿದ್ದರಿಂದ ಮಕ್ಕಳು ಪಂಜರದ ಪಕ್ಷಿಗಳಾಗಿದ್ದಾರೆ. ಮಕ್ಕಳ ಮನಸ್ಸು ಪರೀಕ್ಷೆಗಳು ಮತ್ತು ಅಂಕಗಳನ್ನು ಮಾತ್ರವೇ ಕೇಂದ್ರೀಕರಿಸಿಕೊಂಡು ವರ್ಷವೆಲ್ಲಾ ಅಲ್ಲೆ ಒದ್ದಾಡುವಂತಾಗಿದೆ. ಅದೆ ಜೀವನದ ಅಂತಿಮ ಗುರಿಂ ಎನ್ನುವಂತೆ ಕಲಿಸಿಕೊಡಲಾಗುತ್ತದೆ. ರಜೆಯಲ್ಲಿಯೂ ಸಮ್ಮರ ಕ್ಯಾಂಪ್‌ಗಳಿಗೆ ನೂಕುವುದನ್ನು ನೋಡಿದರೆ ಕರಳು ಚುರುಕ್ ಎನ್ನದಿರದು.

ಪ್ರತಿಯೊಬ್ಬರೂ ತಮ್ಮ ಮಗು ಜೀವನದಲ್ಲಿ ಉತ್ತಮ ಮನುಷ್ಯರಾಗಬೇಕು. ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾ ಜೀವನದ ರಸವನ್ನು ಮೊಗೆ ಮೊಗೆದು ಕುಡಿಯುವಂತಾಗಬೇಕು ಅಂದು ಕಷ್ಟ ಪಟ್ಟು ಹಗಲು ರಾತ್ರಿ ಮಕ್ಕಳಿಗಾಗಿ ದುಡಿಯುತ್ತಾರೆ. ಆದರೆ ಮಗುವಿಗೆ ಸಿಗಬೇಕಾದ ಜೀವನ ಪ್ರೇಮ ಸಿಗದಿದ್ದರೆ ಅವರ ಶ್ರಮವೆಲ್ಲಾ ವ್ಯರ್ಥವಾದಂತೆ. ಪೋಷಕರು ಮಕ್ಕಳಲ್ಲಿ ಜೀವನದ ನೋವು–ನಲಿವುಗಳನ್ನು ಸಮನಾಗಿ ಸ್ವೀಕರಿಸುವ ಮನೋಭಾವ ವೃದ್ಧಿಸುವುದು ಅಗತ್ಯವಿದೆ. ಅದಕ್ಕೆ ವರ್ಷದಲ್ಲಿ ಸಿಗುವ ಅತೀ ಕಡಿಮೆ ರಜೆಯಲ್ಲಿ ಅವರು ಅವರಾಗಿಯೇ ಬೆಳೆಯುವಂತಾಗಲು ಅವಕಾಶ ಮಾಡಿಕೊಡಿಕೊಡುವುದೆ ಅವರಿಗೆ ನಾವು ಕೊಡುವ ಬಹುದೊಡ್ಡ ಗಿಫ್ಟ್.

ಪಾಲಕರು ತಮ್ಮ ಕೆಲಸಕ್ಕೆ ಒಂದಷ್ಟು ದಿನ ರಜೆ ಹಾಕಿ ಮಕ್ಕಳೊಂದಿಗೆ ಹಳ್ಳಿಗೆ ಹೋಗುವುದು ಒಳ್ಳೆಯದು. ಮಕ್ಕಳು ಅಜ್ಜ ಅಜ್ಜಿಯರ ತೊಡೆಯ ಮೇಲೆ ತಮ್ಮ ರಜೆ ಕಳೆಯಲಿ. ಅವರ ಅಪ್ಪುಗೆ, ಸ್ಪರ್ಶದ ಅನುಭೂತಿಯನ್ನು ಯಾವ ಬೇಸಿಗೆ ಶಿಬಿರವೂ ಕೊಡುವುದಿಲ್ಲ. ಅವರು ಹೇಳುವ ಕಥೆಗಳ ಮುಂದೆ ಯಾವ ಕಾರ್ಟೂನ್ ಸಿನಿಮಾಗಳು ನಿಲ್ಲಲಾರವು. ಅವರ ಆ ನಿಷ್ಕಳಂಕ ಪ್ರೀತಿ ಮಗುವಿಗೆ ಬದುಕಿನುದ್ದಕ್ಕೂ ಜೊತೆಯಾಗಿರುತ್ತದೆ. ಈ ನಿಟ್ಟಿನತ್ತ ಪಾಲಕರು ಗಮನ ಹರಿಸಲಿ ಎಂಬುದು ನಮ್ಮ ಆಶಯ.





# ಎಸ್‌ಸಿಪಿ, ಟಿಎಸ್‌ಪಿ, ಯೋಜನೆ ಬಿಡುಗಡೆ

## ಸಿಇಒ ರಾಹುಲ್ ತುಕಾರಾಂ ಪಾಂಡ್ವೆ ಹೇಳಿಕೆ | ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಯೋಜನೆಯ ಅನುದಾನ ಬಳಸಿಕೊಳ್ಳಿ

■ **ಹಂಪಿ ಟೈಮ್ಸ್ ರಾಯಚೂರು**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಉಪಯೋಜನೆ ಕಾರ್ಯಕ್ರಮಗಳಡಿಯಲ್ಲಿ ಬಿಡುಗಡೆಯಾದ ಅನುದಾನವನ್ನು ಆಯಾ ಇಲಾಖೆಯ ಅಧಿಕಾರಿಗಳು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಬೇಕು.

ಅನುದಾನವು ಕೈತಪ್ಪಿಹೋಗದಂತೆ ವಿವಿಧ ಯೋಜನೆಗಳು ಫಲಾನುಭವಿಗಳಿಗೆ ತಲುಪಿಸುವಲ್ಲಿ ಕಾರ್ಯ ನಿರ್ವಹಿಸಬೇಕು ಎಂದು ಮುಖ್ಯಕಾರ್ಯ ನಿರ್ವಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಅವರು ಡಿ.15ರ(ಶುಕ್ರವಾರ) ನಗರದ ಜಿಲ್ಲಾ ಪಂಚಾಯತ್ ಜಲ ನಿರ್ಮಲ ಸಭಾಂಗಣದಲ್ಲಿ ಪರಿಶಿಷ್ಟ ಜಾತಿ ಮತ್ತು ಗಿರಿಜನ ಉಪಯೋಜನೆಯ ಕಾರ್ಯಕ್ರಮಗಳ ಅನುಷ್ಟಾನದ ಕುರಿತು ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎಸ್.ಸಿ.ಪಿ, ಟಿಎಸ್‌ಪಿ ಉಪಯೋಜನೆಯಡಿ ರಾಜ್ಯದಿಂದ ನೀಡಲಾದ ನಮೂನೆಯಂತೆ ಮಾಹಿತಿಗಳ ವರದಿಯನ್ನು ಸಿದ್ದಪಡಿಸಿ, ಅಧಿಕೃತ ಜಾಲತಾಣದಲ್ಲಿ ಅಪಲೋಡ್ ಮಾಡಬೇಕು. ಜಿಲ್ಲೆಯಲ್ಲಿ ಎಸ್‌ಸಿಪಿ, ಟಿಎಸ್‌ಪಿ ಉಪಯೋಜನೆಯಡಿ ಕೈಗೊಂಡ ಕಾಮಗಾರಿಗಳ ಕುರಿತು ತಾಲೂಕು ಮಟ್ಟದಲ್ಲಿ ಸಭೆಗಳನ್ನು ಕೈಗೊಳ್ಳಬೇಕು ಮತ್ತು ಕಾರ್ಯಕ್ರಮಗಳನ್ನು ಅನುಷ್ಟಾನಗೊಳಿಸಲು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು.



ಇಲಾಖೆಗಳಿಗೆ ಬರುವ ಅನುದಾನವನ್ನು ಬಾಕಿ ಉಳಿಸಿಕೊಳ್ಳದೇ ಪೂರ್ಣಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಬೇಕು. ಹಲವು ಇಲಾಖೆಗಳು ಬಿಡುಗಡೆಯಾದ ಅನುದಾನವನ್ನು ಖರ್ಚು ಮಾಡಿಕೊಳ್ಳದೇ ತಮಗೆ ನೀಡಲಾದ ಭತಿಕ ಗುರಿಯಲ್ಲಿ ಕಡಿಮೆ ಪ್ರಮಾಣದ ಸಾಧನೆ ಮಾಡಿದ್ದು, ಕೂಡಲೇ ಸಭೆಗಳನ್ನು ನಡೆಸಿ ಆಯಾ ತಾಲೂಕು ವ್ಯಾಪ್ತಿಯಲ್ಲಿ ಕಾರ್ಯಕ್ರಮಗಳ ಅನುಷ್ಟಾನದಲ್ಲಿ ಹೆಚ್ಚಿನ ಪ್ರಗತಿ ಸಾಧಿಸುವಂತೆ ತಿಳಿಸಿದರು.

ಜಿಲ್ಲೆಯ 32 ಇಲಾಖೆಗಳಲ್ಲಿ ಈಗಾಗಲೇ ಎಸ್.ಸಿ.ಪಿ ಯೋಜನೆಯಡಿ 20,100.78 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ ಒಟ್ಟು 13,895.06 ಲಕ್ಷ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಅನುದಾನದಲ್ಲಿ ಇಲಾಖೆಗಳು 12,775.28 ಲಕ್ಷ ಅನುದಾನ ಖರ್ಚು ಮಾಡಿವೆ. ಟಿಎಸ್‌ಪಿ ಯೋಜನೆಯಡಿ 8950.54 ಲಕ್ಷ ಅನುದಾನ ಹಂಚಿಕೆಯಾಗಿದ್ದು, ಅದರಲ್ಲಿ 6450.90 ಲಕ್ಷ ಅನುದಾನ ಬಿಡುಗಡೆಯಾಗಿದೆ. ಬಿಡುಗಡೆಯಾದ ಟಿಎಸ್‌ಪಿ ಅನುದಾನದಲ್ಲಿ 5518.72 ಲಕ್ಷ ಅನುದಾನ ಖರ್ಚು ಮಾಡಲಾಗಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ ಎಸ್‌ಸಿಪಿ ಉಪಯೋಜನೆಯಡಿ ಜಿಲ್ಲೆಗೆ 91.94% ರಷ್ಟು ಅನುದಾನ ಖರ್ಚು ಮಾಡಲಾಗಿದ್ದು,, ಟಿಎಸ್‌ಪಿ ಉಪಯೋಜನೆಯಡಿ 85.55% ರಷ್ಟು ಅನುದಾನ ಬಿಡುಗಡೆಯಾದ ಅನುದಾನದಲ್ಲಿ ಖರ್ಚು ಮಾಡಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಹೇಶ ಪೋತದಾರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ರಾಜೇಂದ್ರ ಜಲ್ದಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಚೇತನಕುಮಾರ, ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಆರ್.ದೇವಿಕಾ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಮಾಣಿಕ.ವ್ಹಿ.ರಘೋಜಿ, ಮಿನುಗಾರಿಕೆ ಇಲಾಖೆಯ ಉಪನಿರ್ದೇಶಕರು ಎನ್.ಬಸನಗೌಡ, ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿ ಡಾ.ಶಂಕರಗೌಡ ಪಾಟೀಲ್, ಲಿಂಗಸಗೂರು ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ರಾಘವೇಂದ್ರ ರಾವ್.ಕೆ, ಕಾರ್ಮಿಕಾಧಿಕಾರಿ ಆರತಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ವೀರೇಶ ನಾಯಕ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ತೀರುವಳಿ ಕೊಡಿಸಿದ್ರೆ ಕಾಮಗಾರಿಗಳಿಗೆ ಚಾಲನೆ

## ಸಿಎಂ ಸಿದ್ದರಾಮಯ್ಯ ಹೇಳಿಕೆ | ನೀರಾವರಿ ಯೋಜನೆಗಳು ಬರ ಕುರಿತ ಚರ್ಚೆ

■ **ಹಂಪಿ ಟೈಮ್ಸ್ ಬೆಳಗಾವಿ**

ರಾಜ್ಯದ ನೀರಾವರಿ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅನುದಾನ ಮತ್ತು ತೀರುವಳಿಗಳನ್ನು ಪಡೆಯಲು ಸರ್ವ ಪಕ್ಷ ನಿಯೋಗ ಕೊಂಡೊಯ್ಯಲು ಸರ್ಕಾರ ಸಿದ್ಧವಿದೆ. ಕೇಂದ್ರ ಮೇಲೆ ಒತ್ತಡ ಹಾಕಿ ತೀರುವಳಿಗಳನ್ನು ಕೊಡಿಸಿದರೆ ತಕ್ಷಣವೇ ಕಾಮಗಾರಿಗಳ ಪ್ರಕ್ರಿಯೆಗೆ ಚಾಲನೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ವಿಧಾನಮಂಡಲದಲ್ಲಿ ಇಂದು ಉತ್ತರ ಕರ್ನಾಟಕದ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಂದರ್ಭದಲ್ಲಿ ಈ ವಿಷಯ ತಿಳಿಸಿದರು.

ನೀರಾವರಿ ಕೃಷ್ಣಾ ಭಾಗ್ಯ ಜಲ ನಿಗಮ 3 ನೇ ಹಂತದಲ್ಲಿ 130 ಟಿಎಂಸಿ ನೀರು ಬಳಸಬೇಕು ಎಂಬ ಆದೇಶವಿದ್ದರೂ, ಅಫಿಡವಿಟ್ ಹಾಕಿಲ್ಲ. 2 ನೇ ಟ್ರಿಬ್ಯುನಲ್ ಬ್ರಿಜೇಶ್ ಕುಮಾರ್ ವರದಿ ಕೊಟ್ಟು 13 ವರ್ಷಗಳಾಯಿತು. 13 ವರ್ಷಗಳಿಂದ ಗೆಜೆಟ್ ಅಧಿಸೂಚನೆ ಆಗಿಲ್ಲ. ಇದು ಆಗದೇ ಆಲಮಟ್ಟಿ ಜಲಾಶಯದ ಎತ್ತರವನ್ನು 524 ಮೀಟರ್ ಗೆ ಏರಿಸಲಾಗುವುದಿಲ್ಲ. ಈ ಬಗ್ಗೆ ಒತ್ತಾಯಿಸಲು ಸರ್ವ ಪಕ್ಷ ನಿಯೋಗ ಕರೆದೊಯ್ಯಲು ನಾವು ಸಿದ್ದರಿದ್ದೇವೆ. ಆದರೆ ಪ್ರಧಾನಿಗಳು ಭೇಟಿಗೆ ಅವಕಾಶವನ್ನೇ ನೀಡುವುದಿಲ್ಲ. ಮಹದಾಯಿ ಕುಡಿಯುವ ನೀರಿನ ಯೋಜನೆಗೆ ಅರಣ್ಯ ಮತ್ತು ಪರಿಸರದ ತೀರುವಳಿಯಾಗಬೇಕು. ಅವರು ಕೊಟ್ಟ ತಕ್ಷಣ ನಾವು ಕೆಲಸ ಪ್ರಾರಂಭ ಮಾಡುತ್ತೇವೆ. ಮಹದಾಯಿ, ಕೃಷ್ಣಾ ಮೇಲ್ದಂಡೆಗೂ ಸರ್ವ ಪಕ್ಷ ನಿಯೋಗ ಕರೆದೊಯ್ಯಲು ನಾವು ಸಿದ್ದರಿದ್ದೇವೆ ಎಂದರು.

ಕೃಷ್ಣಾ ಮೇಲ್ದಂಡೆಗೆ 21 ಕೋಟಿ ರೂ.ಗಳ ಪರಿಷ್ಕೃತ ಅಂದಾಜು ಪಟ್ಟಿ. 5300 ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದ ಬಜೆಟ್ ನಲ್ಲಿ ಘೋಷಣೆಯಾಗಿದೆ. ಇವತ್ತಿನವರೆಗೆ ಒಂದು ರೂ.ಬಿಡುಗಡೆ ಯಾಗಿಲ್ಲ. ಆದರೆ ಮತ್ತೊಂದೆಡೆ ಕೇಂದ್ರ ಹಣಕಾಸು ಮಂತ್ರಿಗಳು ಕರ್ನಾಟಕಕ್ಕೆ ಯಾವುದೇ ಅನುದಾನ ಬಾಕಿ ಇಲ್ಲ ಎನ್ನುತ್ತಾರೆ. ನಾವು ಅಧಿಸೂಚನೆ ಆಗುವವರೆಗೆ ಪುನರ್ವಸತಿ ಮತ್ತು ಪುನಶ್ಚೇತನ ಕಾರ್ಯವನ್ನು ಕೈಗೊಳ್ಳುತ್ತೇವೆ. ನಾವು ಅತಿ, ಅತ್ಯಂತ, ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿ ಮಾಡಲು ಬದ್ಧರಿದ್ದೇವೆ ಎಂದರು.

ಮೇಕೆ ದಾಟು 2018 ರಲ್ಲಿ ಸುಪ್ರೀಂ ಕೋರ್ಟ್ ನಿರ್ಧಾರ ಸಾಮಾನ್ಯ ವರ್ಷಗಳಲ್ಲಿ 177. 25 ಟಿಎಂಸಿ ತಮಿಳುನಾಡಿಗೆ ಕೊಡಬೇಕು ಎಂದು ತೀರ್ಪು ನೀಡಿದೆ. ಸಂಕಷ್ಟದ ಪರಿಸ್ಥಿತಿಯಲ್ಲಿ ಎರಡೂ ರಾಜ್ಯಗಳೂ ನೀರು ಹಂಚಿಕೊಳ್ಳಬೇಕು ಎಂದು ತಿಳಿಸಿದೆ. ಮೇಕೆದಾಟು ಯೋಜನೆಯು ಕುಡಿಯುವ ನೀರು, ವಿದ್ಯುತ್ ಉತ್ಪಾದನೆ ಮಾಡುವ ಸಲುವಾಗಿ ರೂಪಿಸಿರುವ ಯೋಜನೆ. ಅಣೆಕಟ್ಟು, ಬ್ಯಾಲೆನ್ಸಿಂಗ್ ರಿಸರ್ವಾಯರ್ ಕರ್ನಾಟಕದ ವ್ಯಾಪ್ತಿಯಲ್ಲಿಯೇ ನಿರ್ಮಿಸುವುದು. ಇದರಿಂದ ತಮಿಳುನಾಡಿಗೆ ಏನೂ ಹಾನಿಯಿಲ್ಲ. ಬದಲಿಗೆ ಅನುಕೂಲವಾಗುತ್ತದೆ. ತಮಿಳುನಾಡು, ಕೇರಳ, ಆಂಧ್ರದ ಜೊತೆ ಮಾತುಕತೆ ವಿಫಲವಾಗಿ ನ್ಯಾಯಮಂಡಳಿಯು 193 ಟಿಎಂಸಿ ನೀರು ಕೊಡಬೇಕು ಎಂದು ತೀರ್ಪು ನೀಡಿತ್ತು. ನಂತರ 177.25 ಟಿಎಂಸಿ ಯನ್ನು ತಮಿಳುನಾಡಿಗೆ ಬಿಡಗಡೆ ಮಾಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ ವಿವರಿಸಿದರು.

# ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಬದ್ಧ

■ **ಹಂಪಿ ಟೈಮ್ಸ್ ಬೆಳಗಾವಿ**

ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರವು ಬದ್ಧವಾಗಿದೆ ಎಂದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ವಿಧಾನ ಪರಿಷತ್‌ನಲ್ಲಿ ಹೇಳಿದರು.

ವಿಧಾನ ಪರಿಷತ್‌ನಲ್ಲಿ ಡಿಸೆಂಬರ್ 15ರಂದು ನಡೆದ ಕೊನೆಯ ದಿನದ ಕಲಾಪದಲ್ಲಿ ಉತ್ತರ ಕರ್ನಾಟಕ ಅಭಿವೃದ್ಧಿ ಚರ್ಚೆಯ ಮೇಲೆ ಮಾತನಾಡಿದ ಅವರು, ಉತ್ತರ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಸಂಬಂಧ ಮತ್ತು ಸ್ಥಳೀಯರಿಗೆ ಉದ್ಯೋಗ ಒದಗಿಸುವ ಸಲುವಾಗಿ ಬೆಳಗಾವಿ ಸಮೀಪ ಸುಮಾರು 2,000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ, 500 ಎಕರೆ ಪ್ರದೇಶದಲ್ಲಿ ಫೌಂಡ್ರಿ ಕ್ಲಸ್ಟರ್ ಅನ್ನು ಸ್ಥಾಪಿಸಲಾಗುವುದು ಹಾಗೂ ಜಿಲ್ಲೆಯಲ್ಲಿ ಏರೋಸ್ಪೇಸ್ ಆಧಾರಿತ ಕೈಗಾರಿಕೆಗಳ ಬೆಳವಣಿಗೆಗೆ ವಿಶೇಷ ಒತ್ತು ನೀಡಲಾಗುವುದು ಎಂದು ತಿಳಿಸಿದರು. ಧಾರವಾಡ ಜಿಲ್ಲೆಯಲ್ಲಿ ಕೈಗಾರಿಕಾ ಕ್ಲಸ್ಟರ್ ಜತೆಗೆ ಧಾರವಾಡದ ಸಮೀಪ ಸುಮಾರು 3000 ಎಕರೆ ಪ್ರದೇಶದಲ್ಲಿ ಹೊಸ ಕೈಗಾರಿಕಾ ಪ್ರದೇಶ ಸ್ಥಾಪಿಸಲಾಗುವುದು. ಹತ್ತಿ ಉತ್ಪಾದನೆಯನ್ನು ಪ್ರೋತ್ಸಾಹಿಸಲು ರಾಯಚೂರಿನಲ್ಲಿ ಹತ್ತಿ ಆಧಾರಿತ ಕೈಗಾರಿಕೆಗಳ ಸ್ಥಾಪನೆಗೆ ವಿಶೇಷ ಒತ್ತು ನೀಡಲಾಗುವುದು ಎಂದು ತಿಳಿಸಿದರು. ಸಮೃದ್ಧ ಪ್ರವಾಸೋದ್ಯಮಗಳ ತಾಣವಾದ ಉತ್ತರ ಕರ್ನಾಟಕದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಮಾಡಲು ಸಮಗ್ರ ಕ್ರಿಯಾಯೋಜನೆ ರೂಪಿಸಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಕ್ರಮವಹಿಸಲಾಗುವುದು.

ವಿಜಯಪುರದಲ್ಲಿ ಉತ್ಪಾದನಾ ಕ್ಲಸ್ಟರ್ ಅನ್ನು ಅಂದಾಜು 1500 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗುವುದು. ಧಾರವಾಡದಲ್ಲಿರುವ ವಾಲ್ಮಿ ಜಲ ಮತ್ತು ನೆಲ ನಿರ್ವಹಣೆ ಸಂಸ್ಥೆಯನ್ನು ಉನ್ನತೀಕರಿಸಲಾಗುವುದು. ಬಳ್ಳಾರಿ ಮತ್ತು ರಾಯಚೂರು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಗೊಳಿಸಲು ಹೇಳಿದರು.

ನಂಜುಂಡಪ್ಪ ವರದಿ ಸಲ್ಲಿಕೆಯಾಗಿ 21 ವರ್ಷಗಳಾಗಿವೆ. ಬಯಲು ಸೀಮೆ ಅಭಿವೃದ್ಧಿ ಮಂಡಳಿಯಿಂದಲೂ ಅನುದಾನಗಳನ್ನು ಒದಗಿಸಲಾಗಿದೆ. ಆದಾಗ್ಯೂ ನಿರೀಕ್ಷಿತ ಮಟ್ಟದಲ್ಲಿ ಈ ಭಾಗವು ಅಭಿವೃದ್ಧಿಯಾಗುತ್ತಿಲ್ಲ. ಶಿಕ್ಷಣ, ಆರೋಗ್ಯ, ಆರ್ಥಿಕ ಬೆಳವಣಿಗೆ ಸಾಧಿಸುವಲ್ಲಿ ಈ ಭಾಗದ ಜಿಲ್ಲೆಗಳು ಹಿಂದೆ ಬಿದ್ದಿವೆ. ಹಾಗಾಗಿ ವಿಶೇಷವಾಗಿ ನಂಜುಂಡಪ್ಪನವರ ವರದಿಯ ಅನುಷ್ಠಾನ ಹಾಗೂ ಅದರ ಫಲಶ್ರುತಿಯನ್ನು ಅಧ್ಯಯನ ಮಾಡಲು ಖ್ಯಾತ ಅರ್ಥಶಾಸ್ತ್ರಜ್ಞರೊಬ್ಬರ ಅಧ್ಯಕ್ಷತೆಯಲ್ಲಿ ಹೈಪವರ್ [ಉನ್ನತಾಧಿಕಾರ ಸಮಿತಿ] ಕಮಿಟಿಯನ್ನು ರಚಿಸಲಾಗುವುದು ಎಂದು ಘೋಷಿಸಿದರು. ರಾಜ್ಯದಲ್ಲಿ ಎದುರಾಗಿರುವ ಬರಗಾಲದ ಹಿನ್ನೆಲೆ ಸಹಕಾರ ಬ್ಯಾಂಕುಗಳಲ್ಲಿರುವ ರೈತರು ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲದ ಅಸಲನ್ನು ಕಟ್ಟಿದರೆ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡಲು ನಮ್ಮ ಸರ್ಕಾರ ತೀರ್ಮಾನಿಸಿದೆ. ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯ ಜಿಲ್ಲೆಗಳಲ್ಲಿ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ತುಂಬಲಾಗುವುದು.

# ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ವೃದ್ಧಿಯಾಗಸಿ

■ **ಹಂಪಿ ಟೈಮ್ಸ್ ರಾಯಚೂರು**

ಜಿಲ್ಲೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವಂತಹ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವವನ್ನು ವೃದ್ಧಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಕೆ.ಡಿ.ಬಡಿಗೇರ್ ಅವರು ಹೇಳಿದರು. ಡಿ.14ರ(ಗುರುವಾರ)ದಂದು ಜಿಲ್ಲಾ ಶಿಕ್ಷಣ ತರಬೇತಿ ಕೇಂದ್ರದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಹಾಗೂ ಅಮೆರಿಕನ್ ಇಂಡಿಯಾ ಫೌಂಡೇಶನ್‌ನ ಸಹಯೋಗದೊಂದಿಗೆ ಎಸ್‌ಐಎಲ್‌ಸಿ ಲ್ಯಾಬ್, ಎಸ್‌ಟಿಇಎಮ್ ಆಧಾರಿತ ಶೈಕ್ಷಣಿಕ ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಎಐಎಫ್ ದಾರವಾಡ ಜಿಲ್ಲಾ ಸಂಯೋಜಕರಾದ ಮೋಹಮ್ಮದ್ ಜಿಯಾಉದ್ದೀನ್, ಎಐಎಫ್ ಸಂಸ್ಥೆಯ ಸಿಬ್ಬಂದಿ ಮಹೇಶ ಕುಮಾರ್, ಅಭೀದ್ ಅಲಿ, ಸ್ನೇಹ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು. ಡಾ.ಮುಕ್ತಾ ಅವರು ನಿರೂಪಿಸಿದರು. ಪ್ರಕಾಶ್ ಅವರು ಸ್ವಾಗತಿಸಿದರು.

# ಕ್ಷೇತ್ರಮಟ್ಟದ ಅಧಿಕಾರಿ ಸಿಬ್ಬಂದಿಗೆ ಕಾರ್ಯಾಗಾರ



■ **ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕೊಪ್ಪಳ ಇವರ ಸಂಯುಕ್ತಾಶ್ರಯದಲ್ಲಿ ಡಿ.12 ರಂದು ಬಿ.ಎಸ್ ಪವಾರ್ ಗ್ರ್ಯಾಂಡ್ ಹೋಟೆಲ್‌ನಲ್ಲಿ ಗರ್ಭಪೂರ್ವ ಮತ್ತು ಪ್ರಸವಪೂರ್ವ ಭ್ರೂಣಲಿಂಗ ಪತ್ತೆ ಮತ್ತು ತಂತ್ರ ವಿಧಾನಗಳ (ಲಿಂಗ ಆಯ್ಕೆ ನಿಷೇದ) ಅಧಿನಿಯಮ 1994ರ ಕುರಿತು ಕ್ಷೇತ್ರಮಟ್ಟದ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಕಾರ್ಯಗಾರ ಏರ್ಪಡಿಸಲಾಗಿತ್ತು.

ಕಾರ್ಯಾಗಾರದಲ್ಲಿ ಜಿಲ್ಲಾಧಿಕಾರಿ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಲಿಂಗರಾಜು ಟಿ., ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ರವೀಂದ್ರನಾಥ ಎಂ.ಎಚ್., ಜಿಲ್ಲಾ ಮಟ್ಟದ ಎಲ್ಲಾ ಕಾರ್ಯಕ್ರಮ ಅನುಷ್ಠನಾಧಿಕಾರಿಗಳು, ತಾಲೂಕಾ ಆರೋಗ್ಯಾಧಿಕಾರಿಗಳಾದ ಡಾ. ರಾಮಾಂಜನೇಯ, ಸರ್ಕಾರಿ ಮತ್ತು ಖಾಸಗಿ ರೇಡಿಯಾಲಜಿಸ್ಟ್ ಹಾಗೂ ಹೆರಿಗೆ ಮತ್ತು ಸ್ತ್ರೀರೋಗ ತಜ್ಞರಿಗೆ ಹಾಗೂ ವಿವಿಧ ಆಸ್ಪತ್ರೆಯ ತಜ್ಞವೈದ್ಯರು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

# ಸ್ಕ್ವಾಯ್ ಕ್ರೀಡಾಪಟು ಆಫ್ರೀನಾ ಬಾನುಗೆ ಸನ್ಮಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲ್ಲೂಕಿನ ಬೆಳಗಟ್ಟಿ ಗ್ರಾಮದ ಆಫ್ರೀನಾ ಬಾನು ನಬೀಸಾಬ ಚಕ್ಕಡಿ ಅವರು ಸ್ಕ್ವಾಯ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನದ ಪದಕ ಪಡೆದ ಸಾಧನೆ ಮಾಡಿದ್ದು, ಇವರ ಸಾಧನೆಗೆ ಕೊಪ್ಪಳ ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ವಿಠ್ಠಲ್ ಜಾಬಗೌಡರ್ ಅವರು ಸನ್ಮಾನಿಸಿ ಗೌರವಿಸಿದರು.

ಆಫ್ರೀನಾ ಬಾನು ಅವರು ಮುಂಡರಗಿಯ ಮಂಜು ಡೈಮೆಂಡ್ ಮಿಕ್ಸ್ ಮಾರ್ಷಲ್ ಆರ್ಟ್ಸ್ ಅಕಾಡೆಮಿಯ ತರಬೇತುದಾರರಾದ ಮಂಜುನಾಥ ಭಜಂತ್ರಿ ಇವರ ತರಬೇತಿ ಅಡಿಯಲ್ಲಿ ಜಿಲ್ಲಾ/ರಾಜ್ಯ/ಅಂತರರಾಷ್ಟ್ರೀಯ ಮಟ್ಟದಲ್ಲಿ ವೈಯಕ್ತಿಕ ಹಾಗೂ ಗುಂಪು ಸ್ಪರ್ಧೆಗಳಲ್ಲಿ ಪ್ರಥಮ/ದ್ವಿತೀಯ ಸಾಧನೆ ಪಡೆದು ಕೊಪ್ಪಳ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ. ಅದರಂತೆ 2022ನೇ ಸಾಲಿನಲ್ಲಿ ಜಿಲ್ಲಾ ಮಟ್ಟದ ಸ್ಕ್ವಾಯ್ ಮಾರ್ಷಲ್ ಆರ್ಟ್ಸ್‌ನಲ್ಲಿ ಚಿನ್ನದ ಪದಕ, ಹಾಸನ ಜಿಲ್ಲೆಯಲ್ಲಿ ಜರುಗಿದ ರಾಜ್ಯ ಮಟ್ಟದ ಸ್ಕ್ವಾಯ್ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಪಡೆದುಕೊಂಡಿರುತ್ತಾರೆ. ಹಾಗೇ 2022ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಜರುಗಿದ 18ವರ್ಷ ಮೇಲ್ಪಟ್ಟವರ 23ನೇ ಸ್ಕ್ವಾಯ್ ನ್ಯಾಷನಲ್ ಚಾಂಪಿಯನ್‌ಶಿಪ್‌ನಲ್ಲಿ ರಾಷ್ಟ್ರ ಮಟ್ಟದ ವೈಯಕ್ತಿಕ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು 02 ಚಿನ್ನದ ಪದಕ ಪಡೆದುಕೊಂಡಿರುತ್ತಾರೆ. 2023ರ ಫೆಬ್ರವರಿಯಲ್ಲಿ ನೇಪಾಳದಲ್ಲಿ ಜರುಗಿದ ಸ್ಕ್ವಾಯ್ ಸೌತ್ ಏಷಿಯನ್ ಚಾಂಪಿಯನ್‌ಶಿಪ್‌ನ ಗುಂಪು ಸ್ಪರ್ಧೆಯಲ್ಲಿ ಕೂಡ ಚಿನ್ನದ ಪದಕ ಪಡೆದುಕೊಂಡಿರುತ್ತಾರೆ. ಹರಿಯಾಣದ ಛತ್ತೀಸ್‌ಗಡ್‌ನಲ್ಲಿ ಜರುಗಿದ ಕೇಂದ್ರ ಸರ್ಕಾರದ ಏಕ್ ಭಾರತ್ ಶ್ರೇಷ್ಠ ಭಾರತ್ (ವಿಭಾಗ-1) ಅಡಿ ಚಿನ್ನದ ಪದಕ ಪಡೆದುಕೊಂಡಿರುತ್ತಾರೆ ಮತ್ತು ಗೋವಾದಲ್ಲಿ ನಡೆದ 37ನೇ ನ್ಯಾಷನಲ್ ಗೇಮ್‌ನಲ್ಲಿ ಸ್ಕ್ವಾಯ್ ಕ್ರೀಡೆಯ ಗ್ರೂಪ್ ಏರೋದಲ್ಲಿ ಬೆಳ್ಳಿ ಪದಕ ಮತ್ತು ವೈಯಕ್ತಿಕ ಏರೋದಲ್ಲಿ ಕಂಚಿನ ಪದಕ ಪಡೆದು ಸಾಧನೆ ಮಾಡಿದ್ದಾರೆ.



ಇವರ ಸಾಧನೆಗೆ ಮುಂಬರುವ ದಿನಗಳಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಇನ್ನೂ ಹೆಚ್ಚಿನ ಕ್ರೀಡಾ ಸಾಧನೆಗೆ ಸಂಪೂರ್ಣ ಬೆಂಬಲವನ್ನು ಮತ್ತು ಕ್ರೀಡಾಪಟುವಿಗೆ ಪ್ರೋತ್ಸಾಹಧನ ನೀಡಲಾಗುವುದು ಎಂದು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಶುಭ ಕೋರಿದರು.

**ಕವಿ ಮನಸು**

## ನಾನು ನದಿಯಲ್ಲ, ಕಡಲು

ನಾನು ಹರಿಯುತಲಿದ್ದೆ ಸುಮ್ಮನೆ
ಆಚೆ ಈಚೆ ನೋಡುತ್ತಲೊಮ್ಮೆ.
ತಿಳಿಯಿತು ಕೆಲವು ದಿನಗಳ ಕಳೆದು
ನಾನೊಂದು ನದಿ ಎಂದು.

ಒಮ್ಮೊಮ್ಮೆ ರಭಸ, ಮತ್ತೊಮ್ಮೆ
ಶಾಂತ ರೂಪದ ಧ್ಯಾನಸ್ತಸ್ಥಿತಿಯಲಿ.
ಎಲ್ಲ ಗಿರಿ ಕಂದರಗಳ ಮಧ್ಯೆನುಸುಳಿ
ಆಚೆ ಬರುವುದೊಂದು ಸಾಹಸ.

ಕಂಡೆ ನನ್ನ ಬಿಂಬವನು ರಮಣೀಯ
ನಿಸರ್ಗದಲ್ಲಿ, ಹಚ್ಚಹಸಿರಿನ ಪೈರಿನಲ್ಲಿ
ಪಶು- ಪಕ್ಷಿ,ಪ್ರಾಣಿ ಸಂಕುಲಗಳಲ್ಲಿ.
ಎಲ್ಲಕ್ಕೂ ಮಿಗಿಲಾಗಿ ಜೀವ ಜಲವಾಗಿ.

ನನ್ನದೊಂದು ಪ್ರದರ್ಶನ ನಡೆಯುತಲಿತ್ತು
ಎಲ್ಲ ರಸ ಭಾವಗಳ ನರ್ತನದೊಂದಿಗೆ.
ಚಂದಿರನು ನನ್ನ ನೋಡಿ ಪುಳಕಿತನಾದಾಗ
ನಾನು ಮತ್ತೆ ನರ್ತಿಸುತ್ತಿದ್ದೆ
ಉಲ್ಲಾಸದಿಂದ.

ಹೀಗೆ ಸಾಗುವ ಕೊನೆಯಲ್ಲಿ ನಾನು
ಅಪ್ಪಿಕೊಂಡು, ಕಳೆದ್ಹೋಗುವ ಕಡಲಿಗೆ
ಮುಖಮಾಡಿದೆ.ಭಯ ಆವರಿಸಿತು
ನನ್ನ, ನಾನಿನ್ನು ಇಲ್ಲ ವಾಗುವೆನೆಂದು.

ಪ್ರೇಮಭಾವದಿ ನಸುನಗುತ ಹೇಳಿತೆನಗೆ
ಕಡಲು ,"ನಾನೇ ನಿನ್ನ ಮೂಲ"ವೆಂದು.
ಮತ್ತೆ ಮತ್ತೆ ಖಚಿತ ಪಡಿಸಿತು ಅಂಜಬೇಡ
ನಾನೇ (ಸಮುದ್ರ )ನೀನಾಗುವೆ ಎಂದು.

**– ಗುರು ಹಿರೇಮಠ್**
ಹಗರಿಬೊಮ್ಮನಹಳ್ಳಿ

**PLACE YOUR ADVT.**

HOUSE RENT / SALE / LEASE, CHANGE OF NAME, OBITUARY, Public Notice & EVENT COVERAGE
Contact
9448633038
Near Valmiki Circle, HOSAPETE-583201
Email:hampitimes@gmail.com

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ತುಂಗಭದ್ರಾ ನೀರಿನ ಮಟ್ಟ




| ಶುಕ್ರವಾರ : 15-12-2023 | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1590.87 ಅಡಿ |
| ಒಳ ಹರಿವು | 262 ಕ್ಯುಸೆಕ್ |
| ಹೊರ ಹರಿವು | 1470 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 11.774 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1627.72 ಅಡಿ |
| ಒಳ ಹರಿವು | 1443 ಕ್ಯುಸೆಕ್ |
| ಹೊರ ಹರಿವು | 6573 ಕ್ಯುಸೆಕ್ |
| ಸಾಮರ್ಥ್ಯ | 85.746 ಟಿಎಂಸಿ |

**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ಸಮಸ್ತ ರೈತರಿಗೆ ದಸರ ಹಾಗೂ ದೀಪಾವಳಿ ಹಬ್ಬಕ್ಕೆ ಸಹಕಾರ ನಿಡಿದ್ದಕ್ಕಾಗಿ ತುಂಬು ಹೃದಯದ ಧನ್ಯವಾದಗಳು




ರೈತರ ಕೋರಿಕೆಯ ಮೇರೆಗೆ ಈ ಸ್ಕೀಂ ಇನ್ನೂ 25 ಗ್ರಾಹಕರಿಗೆ ಮಾತ್ರ ವಿಸ್ತರಿಸಲಾಗುವುದು (ಮೊದಲು ಬಂದವರಿಗೆ ಆದ್ಯತೆ)


ಮೈಕ್ರೋ ನ್ಯೂಸ್

## ಸಂಸತ್ ಮೇಲೆ ದಾಳಿ, ಎನ್‌ಎಸ್‌ಯುಐ ಖಂಡನೆ

**ಹಂಪಿ ಟೈಮ್ಸ್ ಹರಪನಹಳ್ಳಿ**

ಸಂಸತ್ ಭವನದ ದಾಳಿಗೆ ಕಾರಣರಾಗಿರುವ ಪ್ರತಾಪ್ ಸಿಂಹ ಅವರನ್ನು ಕೂಡಲೇ ಸಂಸತ್ ಸದಸ್ಯ ಸ್ಥಾನದಿಂದ ವಜಾಗೊಳಿಸಿ ತನಿಖೆ ನಡೆಸಬೇಕು ಎಂದು ಓಖಗಋ ಬಳ್ಳಾರಿ ಹಾಗೂ



ವಿಜಯನಗರ ಜಿಲ್ಲಾ ಉಪಾಧ್ಯಕ್ಷರಾದ ಎಂ.ಡಿ.ಶ್ರೀಕಾಂತ್ ಯಾದವ್ ಆಗ್ರಹಿಸಿದ್ದಾರೆ ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ 'ಸಂಸತ್ ಭವನದ ಮೇಲೆ ಸ್ಮೋಕ್ ಬಾಂಬ್ ದಾಳಿ ನಡೆಸಿದ ಯುವಕರಿಗೆ ಮೈಸೂರಿನ ಸಂಸದ ಪ್ರತಾಪ್ ಸಿಂಹ ಅವರೇ ಪಾಸ್ ನೀಡುವ ವರದಿಗಳು ಬರುತ್ತವೆ, ಪಾಸ್ ಪಡೆದಿರುವ ಯುವಕರು ಸಂಸದರ ಪರಿಚಯಸ್ಥರಾಗಿರಬಹುದ ು.ಪರಿಚಯಸ್ಥರಲ್ಲದೆ ಇದ್ದರೆ ಅಪರಿಚಿತರಿಗೆ ಪಾಸುಗಳನ್ನು ಹೇಗೆ ನೀಡಲಾಯಿತು ಎಂದು ಶ್ರೀಕಾಂತ್ ಯಾದವ್ ಪ್ರಶ್ನಿಸಿದ್ದಾರೆ ಅತ್ಯಂತ ಬಿಗಿಭದ್ರತೆಯ ಹೊರತಾಗಿಯೂ ಇಂತಹದ್ದೊಂದು ಘಟನೆ ನಡೆದಿರುವುದು ಅಘಾತಕಾರಿ ಬೆಳವಣಿಗೆ ಇದು ಸಂಪೂರ್ಣವಾಗಿ ಭದ್ರತಾ ವ್ಯವಸ್ಥೆಯ ಲೋಪ ಎನ್ನುವುದು ಸ್ಪಷ್ಟವಾಗಿದೆ ಈ ಬಗ್ಗೆ ನಿಷ್ಪಕ್ಷಪಾತ ತನಿಖೆ ನಡೆಸಿ ಘಟನೆಯ ಹಿಂದಿನ ಸಂಪೂರ್ಣ ಸತ್ಯವನ್ನು ದೇಶದ ಮುಂದಿಡುವುದು ಕೇಂದ್ರ ಸರ್ಕಾರದ ಕರ್ತವ್ಯವಾಗಿದೆ ಎಂದಿದ್ದಾರೆ 22 ವರ್ಷಗಳ ಹಿಂದೆ ಸಂಸತ್ ಭವನದ ಮೇಲೆ ಭಯೋತ್ಪಾದಕರು ನಡೆಸಿದ್ದರು ದಾಳಿಯ ದಿನವನ್ನೇ ಆರಿಸಿಕೊಂಡು ಈ ದಾಳಿ ನಡೆದಿರುವುದನ್ನು ಗಮನಿಸಿದರೆ ಇದರ ಹಿಂದೆ ಹುನ್ನಾರಗಳಿರಬಹುದೆಂಬ ಸಂಶಯವೂ ಮೂಡುತ್ತದೆ.2001ರ ದಾಳಿಯ ಸಮಯದಲ್ಲಿಯೂ ಬಿಜೆಪಿ ನೇತೃತ್ವದ ಓ.ಆ.ಂ. ಸರ್ಕಾರವೇ ಇತ್ತು ಎನ್ನುವುದನ್ನು ಗಮನಿಸಬೇಕಾಗುತ್ತದೆ. ಇದು ದೇಶದ ಸುರಕ್ಷತೆಯ ಬಗ್ಗೆ ಹಲವಾರು ಪ್ರಶ್ನೆಗಳಿಗೆ ಕಾರಣವಾಗಿದೆ ಎಂದು ಓಖಗಋ ಜಿಲ್ಲಾ ಉಪಾಧ್ಯಕ್ಷರು ಎಂ ಡಿ ಶ್ರೀಕಾಂತ್ ಯಾದವ್ ಹೇಳಿದ್ದಾರೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ದೇಶದ ಭದ್ರತಾ ಲೋಪ ಎದ್ದು ಕಾಣುತ್ತದೆ. 300 ಏಐ ಖಆಘ ಯಾವುದೇ ಅಡೆತಡೆ ಇಲ್ಲದೆ ಕಾಶ್ಮೀರದೊಳಗೆ ಬರುತ್ತದೆ ಸ್ಫೋಟಕ ವಸ್ತು ಕೂಡ ಯಾವುದೇ ಅಡೆತಡೆ ಇಲ್ಲದೆ ಸಂಸತ್ತಿನೊಳಗೆ ಬರುತ್ತದೆ. ಸಂಸತ್ತನ್ನೇ ಕಾಯಲಾಗದ ನಮ್ಮ ದೇಶದ ಪ್ರಧಾನಿ ಮಂತ್ರಿ ನರೇಂದ್ರ ಮೋದಿ ಅವರು(ಚೌಕಿದಾರ್) ನಮ್ಮ ದೇಶ ಕಾಯಲು ಸಾಧ್ಯವೇ ಎಂದು ಓಖಗಋ ಜಿಲ್ಲಾ ಉಪಾಧ್ಯಕ್ಷರು ಎಂ ಡಿ ಶ್ರೀಕಾಂತ್ ಯಾದವ್ ತಿಳಿಸಿದ್ದಾರೆ.


ನಿಮ್ಮ ಹೊಸ ಹೊಸ ಉತ್ಪನ್ನಗಳು, ವಿಶೇಷ ಕೊಡುಗೆಗಳು ಮತ್ತು ಕಾಲೇಜು ಪ್ರವೇಶ ಕುರಿತು ನಿಮ್ಮ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ: ಹಂಪಿ ಟೈಮ್ಸ್ : ಮೊ: 9448633038





# ದಣಿದವರಿಗೆ ಕೂಲಿ ನೀಡಿ...ಪತ್ರ ಚಳುವಳಿ

## ನರೇಗಾದಡಿ 50 ಮಾನವ ದಿನಗಳ ಹೆಚ್ಚಳಕ್ಕೆ ಆಗ್ರಹ । ಕೂಲಿ ಕೊಡಿ ಗುಳೆ ತಡೆಯಿರಿ ಒಕ್ಕೊರಳ ಧ್ವನಿ

**■ ಹಂಪಿ ಟೈಮ್ಸ್, ಹಗರಿಬೊಮ್ಮನಹಳ್ಳಿ**

ರಾಜ್ಯದಲ್ಲಿ ಬರಗಾಲ ಹಿನ್ನೆಲೆಯಲ್ಲಿ ನರೇಗಾ ಯೋಜನೆಯನ್ನು ಇನ್ನೂ 50 ಮಾನವ ದಿನಗಳನ್ನು ಘೋಷಿಸುವಂತೆ ಆಗ್ರಹಿಸಿ, ಗ್ರಾಮೀಣ ಕೂಲಿಕಾರರ ಸಂಘದ ನೇತೃತ್ವದಲ್ಲಿ ತಾಲೂಕಿನ ಆಯಾ ಗ್ರಾಮಗಳಲ್ಲಿ ಕೂಲಿ ಕಾರ್ಮಿಕರಿಂದ ಶುಕ್ರವಾರ ಕೂಲಿನೀಡಿ, ಕೂಲಿನೀಡಿ ಎಂದು ಆಗ್ರಹಿಸುತ್ತ ಪತ್ರ ಚಳುವಳಿ ನಡೆಸಿದರು.

ಸಂಘಟನೆಯ ಸಂಚಾಲಕರಾದ ಕೊಟ್ರಮ್ಮ ಹಾಗೂ ಅಕ್ಕಮ್ಮ ಮಾತನಾಡಿ, ಕರ್ನಾಟಕ ಸಂಪೂರ್ಣ ಬರಗಾಲಕ್ಕೆ ತುತ್ತಾಗಿ, ರೈತರು ಸೇರಿದಂತೆ ಕೂಲಿ ಕಾರ್ಮಿಕರು ಕೂಲಿ ಹರಸಿ ದೂರದೂರುಗಳಿಗೆ ಗುಳೆ ಹೋಗುವಂತ ಪರಿಸ್ಥಿತಿ ಬಂದೊದಗಿದೆ, ಗುಳೆ ಹೋಗುವುದನ್ನು ತಪ್ಪಿಸಲು ಕೇಂದ್ರ



ಸರ್ಕಾರದ ಮಹತ್ವವಾದ ಯೋಜನೆಯಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಈಗಾಗಲೇ 100 ದಿನಗಳ ಕಾರ್ಯಮುಗಿಸಿದ್ದು, ಇನ್ನೂ ಮುಂದುವರೆದು 50 ಮಾನವ ದಿನಗಳಿಗೆ ಹೆಚ್ಚಿಸಬೇಕು ಎಂದರು.

ಅಲ್ಲದೆ, ಈಗಾಗಲೇ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದ ಕೂಲಿ ಕಾರ್ಮಿಕರಿಗೆ 3 ತಿಂಗಳಿನಿಂದ ಕೂಲಿ ನೀಡಿಲ್ಲ. ಕೂಡಲೇ ಕೂಲಿ ಮೊತ್ತವನ್ನು ಬಿಡುಗಡೆಮಾಡಬೇಕು ಎಂದು ಒತ್ತಾಯಿಸಿ ಈ ಪತ್ರ ಚಳುವಳಿ ಮಾಡಲಾಗುತ್ತಿದ್ದು, ಪ್ರಧಾನ ಮಂತ್ರಿಗಳು ಇತ್ತ ಗಮನ ಹರಿಸಿ ಲಕ್ಷಾಂತರ ಕೂಲಿ ಕಾರ್ಮಿಕರನ್ನು ರಕ್ಷಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ವೇಳೆ ತಾಲೂಕಿನ ವಲ್ಲಭಾಪುರ, ಸೊನ್ನ,ಹರೇಗೊಂಡನಹಳ್ಳಿ,ಹಂಪಾಪಟ್ಟಣ, ಕೋಡಿಹಳ್ಳಿ, ಗದ್ದಿಕೆರೆ, ಚಿಲುಗೋಡು, ಪಿಲ್ಲೋಬನಹಳ್ಳಿ, ಬಲ್ಲಾಹುಣಸಿ ಮುಂತಾದ ಗ್ರಾಮಗಳಲ್ಲಿ ಕೂಲಿಕಾರ್ಮಿಕರಿಂದ ಪತ್ರ ಚಳುವಳಿ ಜರುಗಿತು.

ಈ ವೇಳೆ ನಿರ್ಮಲ, ಚೈತ್ರ, ಪವಿತ್ರ, ಹುಲಿಗೆಮ್ಮ, ಲಲಿತಾ, ರಾಘವೆಂದ್ರ, ನಾಗರಾಜ್, ನಾರಪ್ಪ, ಅಶೋಕ, ದೇವೇಂದ್ರ, ಸುಜಾತ, ಅಂಜಿನಮ್ಮ, ರವಿಕುಮಾರ್, ರೇವಣ್ಣ, ಮಲ್ಲಮ್ಮ, ದುರುಗಮ್ಮ, ಕಾಳಮ್ಮ, ಗೋಣೆಪ್ಪ, ನಾಗರತ್ನ, ಸರೋಜ, ಶರಣಪ್ಪ, ಮದ್ದಾನಪ್ಪ, ಬಸಪ್ಪ, ದೇವಕ್ಕ, ಗೌರವ್ವ, ಹನುಮಂತ, ಟಿ.ಗಂಗಪ್ಪ, ಸಿದ್ಲಿಂಗಪ್ಪ, ಹನುಮಕ್ಕ, ಕಾರ್ಯಕರ್ತರಾದ ಪುಷ್ಪಾವತಿ ಮತ್ತು ಲಲಿತಾ ಮುಂತಾದವರಿದ್ದರು.

# ಇಂಗ್ಲಿಷ್ ವ್ಯಾಮೋಹ ಕನ್ನಡಕ್ಕೆ ಪೆಟ್ಟು

## ಕಸಾಪ ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ ಹೇಳಿಕೆ । ರಸಪ್ರಶ್ನೆ ಕಾರ್ಯಕ್ರಮ



■ ಹಂಪಿ ಟೈಮ್ಸ್ ಕೂಡ್ಲಿಗಿ

ಜಗತ್ತಿನ ಇತರೇ ಭಾಷೆಗಳಿಗಿಂತ ಕನ್ನಡ ಭಾಷೆ ಅತ್ಯಂತ ಶ್ರೀಮಂತ ಹಾಗೂ ಸಮೃದ್ಧ ಭಾಷೆಯಾಗಿದೆ ಎಂದು ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಪಿ.ಶಿವರಾಜ್ ಹೇಳಿದರು.

ಪಟ್ಟಣದ ಸರ್ಕಾರಿ ಜೂನಿಯರ್ ಕಾಲೇಜಿನಲ್ಲಿ ಶುಕ್ರವಾರ ಕನ್ನಡ ಸಾಹಿತ್ಯ ಪರಿಷತ್ತು ತಾಲೂಕು ಘಟಕದಿಂದ ಕರ್ನಾಟಕ ನಾಮಕರಣಗೊಂಡ 50 ನೇ ವರ್ಷದ ಸುವರ್ಣ ಸಂಭ್ರಮಾಚರಣೆ ಅಂಗವಾಗಿ ಏರ್ಪಡಿಸಿದ್ದ ರಸಪ್ರಶ್ನೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಕನ್ನಡ ಭಾಷೆ ಇತರೆ ಭಾಷೆಗಳಿಂದ ವಿಭಿನ್ನವಾಗಿದೆ, ಅತ್ಯಂತ ಸರಳ ಹಾಗೂ ಭಾಷಾ ಸಂಪತ್ತನ್ನು ಹೊಂದಿರುವ ಕಾರಣ ನಾಡಿನ ಅನೇಕ ಕವಿಗಳು ಉತ್ತಮ ಸಾಹಿತ್ಯಗಳನ್ನ ರಚಿಸಿ ಈ ಭಾಷೆಯನ್ನು ಅತ್ಯಂತ ಶ್ರೀಮಂತಗೊಳಿಸಿದ್ದಾರೆ. ಎಂಟು ಜ್ಞಾನಪೀಠ ಪ್ರಶಸ್ತಿ ಬಂದಿರುವುದೇ ಇದಕ್ಕೆ ಸಾಕ್ಷಿಯಾಗಿದೆ ಎಂದರು.

ಕಸಾಪ ತಾಲೂಕು ಅಧ್ಯಕ್ಷ ವೀರೇಶ್ ಅಂಗಡಿ ಕಾರ್ಯಕ್ರಮ ಅಧ್ಯಕ್ಷತೆವಹಿಸಿ ಮತನಾಡಿ, ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಭಾಷೆ ಇತರೆ ಭಾಷೆಗಳಿಗಿಂತ ಸದೃಡವಾಗಿದೆ. ಸಾಹಿತೀಕವಾಗಿ ಕನ್ನಡ ಭಾಷ ಸಂಪತ್ತು ಇತರೆ ಭಾಷೆಗಳಿಗೆ ಹೋಲಿಸಿದರೆ. ಅತ್ಯಂತ ಉನ್ನತ ಮಟ್ಟದಲ್ಲಿ ಇದೆ.ಆದರೆ ಇತ್ತೀಚಿನ ಇಂಗ್ಲಿಷ್ ವ್ಯಾಮೋಹದಿಂದ ಕನ್ನಡ ಭಾಷೆಗೆ ಕೊಡಲಿ ಪೆಟ್ಟು ಬೀಳುತ್ತಿದೆ. ಆದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಉಪನ್ಯಾಸ ಹಾಗೂ ಕನ್ನಡಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ಪ್ರೌಢಶಾಲಾ ಹಂತದಲ್ಲಿ ಹಮ್ಮಿಕೊಳ್ಳುವ ಮೂಲಕ ಕನ್ನಡ ಭಾಷೆ ಉಳುವಿಗಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ನಂತರ ನಡೆದ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಪಟ್ಟಣದ ಎಂಟು ಪ್ರೌಢಶಾಲೆಗಳ ವಿಧ್ಯಾರ್ಥಿಗಳು ಭಾಗವಹಿಸಿದ್ದರು. ಇದರಲ್ಲಿ ವಾಸವಿ ಪ್ರೌಢಶಾಲೆಯ ವಿಧ್ಯಾರ್ಥಿಗಳುಪ್ರಥಮಬಹುಮಾನಪಡೆದರು.ದ್ವಿತೀಯ ಬಹುಮಾನವನ್ನು ಸರ್ಕಾರಿ ಜೂನಿಯರ್ ಕಾಲೇಜ್ ವಿಧ್ಯಾರ್ಥಿಗಳು ಪಡೆದರೆ,ತೃತೀಯ ಬಹುಮಾನವನ್ನು ಜ್ಞಾನಭಾರತಿ ಶಾಲೆಯ ವಿಧ್ಯಾರ್ಥಿಗಳು ಪಡೆದರು. ಶಿಕ್ಷಣ ಸಮನ್ವಯಾಧಿಕಾರಿ ಎಸ್.ಎಸ್.ಜಗದೀಶ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಎಸ್.ವಿ.ಸಿದ್ದರಾಧ್ಯ, ಪ್ಯಾನಲ್ ವಕೀಲ ಸಿ.ವಿರೂಪಾಕ್ಷಪ್ಪ, ಸಿಪಿಐ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಚ್.ವೀರಣ್ಣ, ಉಪ ಪ್ರಾಚಾರ್ಯ ಎಚ್.ಬಸವರಾಜ, ಕನ್ನಡ ಜಾನಪದ ಪರಿಷತ್ತು ತಾಲೂಕು ಅಧ್ಯಕ್ಷ ಕೆ.ಎಂ.ವೀರೇಶ್, ಎಸ್ಡಿಎಂಸಿ ಅಧ್ಯಕ್ಷ ಶ್ರೀಧರ, ಶಿಕ್ಷಣ ಸಂಯೋಜಕರಾದ ನಾಗರಾಜ,ಆನಂದ್,ಶಿಕ್ಷಕರಾದ ಉಡುಚಪ್ಪ, ಭಾಸ್ಕರ ನಾಯ್ಕ್, ಶಿವಾನಂದ ಸ್ವಾಮಿ, ರುದ್ರಪ್ಪ, ಕಸಾಪ ಕಾರ್ಯದರ್ಶಿ ನಂದಿ ಬಸವರಾಜ, ರಿಯಾಜ್ ಪಾಷ ಇತರರು ಇದ್ದರು.

# ವಿದ್ಯಾರ್ಥಿಗಳ ಕಲಿಕೆಗೆ ಹಿನ್ನಡೆ



**■ ಹಂಪಿ ಟೈಮ್ಸ್ ಕೂಡ್ಲಿಗಿ**

ಪಟ್ಟಣದ ನಾನಾ ಕಾಲೇಜುಗಳಲ್ಲಿ ಭೋದನೆ ಮಾಡುತ್ತಿರುವ ಅತಿಥಿ ಉಪನ್ಯಾಸಕರ ಸಮಸ್ಯೆಗಳನ್ನು ಆಲಿಸಿ ವಿಧ್ಯಾರ್ಥಿಗಳ ತರಗತಿಗಳನ್ನು ಸುಗಮವಾಗಿ ನಡೆಸಲು ಅನುವು ಮಾಡಿಕೊಡಬೇಕು ಎಂದು ಎಬಿವಿಪಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿ ಗ್ರೇಡ್ 2 ತಹಶಿಲ್ದಾರ್ ಕುಮಾರಸ್ವಾಮಿ ಮೂಲಕ ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿಗೆ ಮನವಿ ಪತ್ರ ನೀಡಿದರು.

ರಾಜ್ಯದಲ್ಲಿ ಅನೇಕ ಕಾಲೇಜುಗಳಲ್ಲಿ ಭೋದನೆ ಮಾಡುತ್ತಿರುವ ಅತಿಥಿ ಉಪನ್ಯಾಸಕರಗಳಿಗೆ ಸೂಕ್ತ ವೇತನ ನೀಡದೆ ಅವರು ಸಂಕಷ್ಟದಲ್ಲಿದ್ದು, ನಿಗದಿತ ದಿನಾಂಕಕ್ಕೆ ಕೂಡ ಸಂಬಳ ನೀಡುತ್ತಿಲ್ಲ ಇದರಿಂದ ಅವರು ಪರಿತಪಿಸುತ್ತಿದ್ದಾರೆ. ಇದರಿಂದಾಗಿ ಪದವಿ ಕಾಲೇಜುಗಳಲ್ಲಿ ಸರಿಯಾಗಿ ತರಗತಿಗಳು ನಡೆಯದೆ ವಿದ್ಯಾರ್ಥಿಗಳ ಪಠ್ಯ ಚಟುವಟಿಕೆಗಳಲ್ಲಿ ಹಿನ್ನಡೆ ಆಗುತ್ತಿದೆ. ಕೆಲವೊಂದು ವಿಶ್ವವಿದ್ಯಾಲಯಗಳು ಸೆಮಿಸ್ಟರ್ ಪರೀಕ್ಷೆಯನ್ನು ನಡೆಸುವ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ ಆದರೆ ತರಗತಿಗಳು ಸರಿಯಾಗಿ ನಡೆಯದೆ ವಿದ್ಯಾರ್ಥಿಗಳು ಹೇಗೆ ಪರೀಕ್ಷೆ ಬರೆಯಬೇಕು ಎಂಬ ಪ್ರಶ್ನೆ ವಿದ್ಯಾರ್ಥಿ ಸಮುದಾಯದ ಮಧ್ಯೆ ಮೂಡುತ್ತಿದೆ.

ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಿ ಗೌರವತ ಜೀವನವನ್ನು ಸಾಧ್ಯವಾಗಿಸುವುದು ಸರ್ಕಾರದ ಕರ್ತವ್ಯವಾಗಿದೆ, ರಾಜ್ಯ ಸರ್ಕಾರವು ಈ ವಿಷಯದಲ್ಲಿ ಯಾವುದೇ ರೀತಿ ವಿಳಂಬ ಮಾಡದೆ ಅತಿಥಿ ಉಪನ್ಯಾಸಕರಿಗೆ ನೀಡುವ ಸಂಬಳವನ್ನು ಸರ್ಕಾರಿ ನೌಕರರಿಗೆ ನೀಡುವ ಹಾಗೆ ಪ್ರತಿ ತಿಂಗಳು ನೀಡಬೇಕು, ಅತಿಥಿ ಉಪನ್ಯಾಸಕರಿಗೆ ಯುಜಿಸಿ ನಿಯಮಾವಳಿ ಪ್ರಕಾರ ವೇತನವನ್ನು ನೀಡಬೇಕು. ಈ ವಿಷಯದಲ್ಲಿ ಸರ್ಕಾರ ತಕ್ಷಣವೇ ಪರಿಹಾರವನ್ನು ನೀಡಿ ತರಗತಿಗಳು ನಡೆಯಲು ಅನುವು ಮಾಡಿಕೊಡಬೇಕೆಂದು ರಾಜ್ಯ ಸರ್ಕಾರಕ್ಕೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಆಗ್ರಹಿಸಿ ಪ್ರತಿಭಟನೆ ನಡೆಸಿತು.

ಎಬಿವಿಪಿ ತಾಲೂಕು ಅಧ್ಯಕ್ಷ ಪಿ. ಡಾ.ಉಮೇಶ, ರಾಜ್ಯ ಕಾರ್ಯಕಾರಣಿ ಸದಸ್ಯ ಕೆ. ಕೃಷ್ಣ ಎಬಿವಿಪಿ ಕಾರ್ಯಕರ್ತರಾದ ಜಿ. ಶರತ್ ಗೌಡ್ರು, ಸಚಿನ್, ದೇವರಾಜು ಯು. ಎಸ್, ಪಿ. ನಾಗರಾಜ್, ಯರಿಸ್ವಾಮಿ, ರಮೇಶ್, ಯಶ್, ಬಿ. ಚಿತ್ತಪ್ಪ, ಉದಯ್, ಪವನ್ ಕುಮಾರ್, ನಂದಿನಿ, ಅರ್ಪಿತ, ಅಖಿಲ, ಐಶ್ವರ್ಯ ಹಾಗೂ ಅತಿಥಿ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.






# ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಅವಧಿ ವಿಸ್ತರಣೆ

**■ ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2023-24ನೇ ಸಾಲಿನ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆಆನ್‌ಲೈನ್ ಮೂಲಕ ಅರ್ಜಿಆಹ್ವಾನಿಸಲಾಗಿದ್ದು,ಅವಧಿಯನ್ನುವಿಸ್ತರಿಸಲಾಗಿದೆ. ಪ್ರವರ್ಗ-1, ಎಸ್ಸಿ ಮತ್ತು ಎಸ್ಟಿ ವಿದ್ಯಾರ್ಥಿಗಳ ಪೋಷಕರ ವಾರ್ಷಿಕಆದಾಯ ಮಿತಿ 2.50 ಲಕ್ಷ ಹಾಗೂ ಪ್ರವರ್ಗ-2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಮತ್ತುಇತರೆ ವಿದ್ಯಾರ್ಥಿಗಳ ಪೋಷಕರ ವಾರ್ಷಿಕಆದಾಯ 1 ಲಕ್ಷದೊಳಗಿರಬೇಕು. ಮೆಟ್ರಿಕ್ ನಂತರ ಬಾಲಕರ ಮತ್ತುಬಾಲಕಿಯರ ವಿದ್ಯಾರ್ಥಿ ನಿಲಯಗಳಲ್ಲಿ (ವೃತ್ತಿಪರ ಪದವಿ, ಸ್ನಾತಕೊತ್ತರ ಪದವಿ ಕೋರ್ಸ್ ವಿದ್ಯಾರ್ಥಿಗಳಿಗೆ ಮಾತ್ರ) ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವಅರ್ಹ ವಿದ್ಯಾರ್ಥಿಗಳು ವೆಬ್ ಸೈಟ್ https://shp.karnataka.gov.in ನಲ್ಲಿ ಡಿ.22 ರೊಳಗಾಗಿ ಅರ್ಜಿ ಸಲ್ಲಿಸಬೇಕು.

ತಾಲ್ಲೂಕವಾರು ವಿದ್ಯಾರ್ಥಿ ನಿಲಯಗಳ ವಿವರ ಹಾಗೂ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರ್ಕಾರದಆದೇಶಕ್ಕಾಗಿ ಇಲಾಖೆ ವೆಬ್ ಸೈಟ್ https://bcwd.karnataka.gov.in ನ್ನು ಸಂಪರ್ಕಿಸಬಹುದು. ಅರ್ಜಿ ಸಲ್ಲಿಸಲುತಾಂತ್ರಿಕ ತೊಂದರೆಗಳಾದಲ್ಲಿ ಇ-ಮೇಲ್ bcwd.hostels@karnataka.gov.in ಮುಖಾಂತರ ಅಥವಾ ಜಿಲ್ಲಾ, ತಾಲ್ಲೂಕ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರನ್ನುಅಗತ್ಯ ದಾಖಲೆಗಳೊಂದಿಗೆ ಹಾಗೂ ಸಹಾಯವಾಣಿ ಸಂಖ್ಯೆ 8050770005 ಗೆ ಸಂಪರ್ಕಿಸಬಹುದಾಗಿದೆ ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA